ಸಂಪುಟ : 10 ಸಂಚಿಕೆ: 170 ಪುಟ : 4+2 ಬೆಲೆ: 3.00 ಮಂಗಳವಾರ ಆಗಸ್ಟ್ 12 2025 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 10 Issue : 170 Pages : 4+2 Price : 3.00 Tuesday August 12 2025 Gadag RNINo:KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಮುಂಡರಗಿ ತಾಲೂಕಿನ ಕೊರ್ಲಹಳ್ಳಿಯ ಜವಾಹರ ನವೋದಯ 11ನೇ ತರಗತಿಯ ವಿಜ್ಞಾನ ವಿಭಾಗದಲ್ಲಿ ಎರಡನೇ ವಿಭಾಗ ತೆರೆದಿದ್ದು, 10ನೇ ತರಗತಿಯ ಅಂಕಗಳ ಆಧಾರದ ಮೇಲೆ ಅರ್ಹ ಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಆಗಸ್ಟ್ 20 ಆಗಿರುತ್ತದೆ. ಅರ್ಜಿ ನಮೂನೆಗಳನ್ನು www.navodaya.gov.in ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ವಿದ್ಯಾಲಯದ ಕಚೇರಿ ದೂರವಾಣಿ ಸಂಖ್ಯೆ–08371–200401 ಅಥವಾ 9945699049, 9945872052ಗೆ ಸಂಪರ್ಕಿಸ ಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಟೆಂಡರ್ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಸತ್ರ ನ್ಯಾಯಾಲಯಗಳಲ್ಲಿ ಕಚೇರಿ ಸ್ವಚ್ಛತೆ ಮತ್ತು ಕೈತೋಟ ನಿರ್ವಹಣೆಗೆ ಸೇವಾ ಗುತ್ತಿಗೆ ಆಧಾರದ ಮೇಲೆ ಟೆಂಡರ್ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಕಚೇರಿಯಲ್ಲಿ ಪಡೆಯಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

### ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸುರವರ 110ನೇ ಜನ್ಮದಿನಾಚರಣೆಯ ಪೂರ್ವಭಾವಿ ಸಭೆಯಲ್ಲಿ ಡಿಸಿ ಸಿ.ಎನ್. ಶ್ರೀಧರ್ ಸೂಚನೆ

# ಅರ್ಥಪೂರ್ಣ ಆಚರಣೆಗೆ ಸಿದ್ಧತೆ ನಡೆಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ 110ನೇ ಜನ್ಮ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ಸಕಲ ಸಿದ್ಧತೆ ಮಾಡಿಕೊಳ್ಳಲು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಜರುಗಿದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ 110ನೇ ಜನ್ಮ ದಿನಾಚರಣೆ ಕುರಿತ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಾಜಿ ಮುಖ್ಯಮಂತ್ರಿಗಳಾದ ಡಿ. ದೇವರಾಜ ಅರಸು ಅವರ ಜನ್ಮ ದಿನಾಚರಣೆಯ ಪ್ರಯಕ್ತ ಅವರ ಜೀವನ ಸಾಧನೆಗಳ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಪ್ರಬಂಧ, ಭಾಷಣ ಸ್ಪರ್ಧೆ ಆಯೋಜಿಸಬೇಕೆಂದು ಸೂಚಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರಿಂದ ಜಿಲ್ಲಾ ಮಟ್ಟದ ಕಾರ್ಯಕ್ರಮಕ್ಕೆ ದಿನಾಂಕ ನಿಗದಿಪಡಿಸಲು ತಿಳಿಸಿದ ಅವರು, ಕಾರ್ಯಕ್ರಮದ ಕುರಿತು ಶಿಷ್ಟಾಚಾರದನ್ವಯ ಆಮಂತ್ರಣ ಪತ್ರಿಕೆಗಳನ್ನು ಮುದ್ರಿಸಿ ಗಣ್ಯರುಗಳಿಗೆ ಮುಂಚಿತವಾಗಿ ತಲುಪಿಸಬೇಕು. ಕಾರ್ಯಕ್ರಮದ ದಿನದಂದು ರಾಣಿ ಚನ್ನಮ್ಮ ವೃತ್ತದಿಂದ ಕನಕ ಭವನದವರೆಗೆ ಭವ್ಯ ಮೆರವಣಿಗೆ



ಆಯೋಜಿಸಲು ಸರ್ವ ಸಿದ್ಧತೆ ಮಾಡಿಕೊಳ್ಳಬೇಕು ಎಮದು ನಿರ್ದೇಶನ ನೀಡಿದರು.

ಕಾರ್ಯಕ್ರಮದ ನಿರೂಪಕರು ಹಾಗೂ ಡಿ.ದೇವರಾಜ ಅರಸುರವರ ಜೀವನ ಗಾಥೆಯನ್ನು ಸವಿವರವಾಗಿ ತಿಳಿಸಬಲ್ಲ ನುರಿತ ಉಪನ್ಯಾಸಕರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ತಿಳಿಸಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಎಂ.ಎಂ. ತುಂಬರಮಟ್ಟಿ ಮಾತನಾಡಿ, ಇಲಾಖೆಯ ವತಿಯಿಂದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಗುವದು ಎಂದು ತಿಳಿಸಿದರು.

> ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಾಲೂಕು ಅಧಿಕಾರಿ ಬಸವರಾಜ ಬಳ್ಳಾರಿ ಮಾತನಾಡಿ, ಗದಗ ತಾಲೂಕಿನ ಮತ್ತು ಗದಗ ಜಿಲ್ಲೆಯಲ್ಲಿ ಇರುವ ವಸತಿ ನಿಲಯಗಳಲ್ಲಿ ಡಿ. ದೇವರಾಜ ಅರಸು ಅವರ 110ನೇ ಜಯಂತಿ ಅಂಗವಾಗಿ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ, ರಸಪ್ರಶ್ನೆ, ರಂಗೋಲಿ ಸ್ಪರ್ಧೆ ಮತ್ತು ಒಳಾಂಗಣ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗುವದು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭರತ್ ಎಸ್, ಸಮಾಜದ ಹಿರಿಯರಾದ ಪಕೀರಪ್ಪ ಹೆಬ್ಸೂರ್, ಆರ್.ಡಿ. ಕಡ್ಲಿಕೊಪ್ಪ, ಎಸ್.ಮಲ್ಲಿಕಾರ್ಜುನ, ರುದ್ರಣ್ಣ ಗುಳಗುಳಿ, ಹರೀಶ್ ಪೂಜಾರ್, ಮೋಹನ್ ಚಂದಪ್ಪನವರ್, ಶಿವಪ್ಪ ಮಡಿವಾಳರ, ದ್ಯಾಮಣ್ಣ ಮಡಿವಾಳರ ಸೇರಿದಂತೆ ವಿವಿಧ ಇಲಾಖೆಗಳ ಉಪಸ್ಥಿತರಿದ್ದರು.

### ಸಚಿವ ಕೆ.ಎನ್. ರಾಜಣ್ಣ ರಾಜೀನಾಮೆ ವಿಚಾರವಾಗಿ ಪ್ರತಿಕ್ರಿಯಿಸಿದ ಕೋಡಿಶ್ರೀ

# ಅರಸನ ಅರಮನೆಗೆ ಕಾರ್ಮೋಡ ಕವಿದಿತು!

■ ವಿಜಯಸಾಕ್ಷಿ ಸುದ್ದಿ, ಗದಗ

ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಅಪಾಯ ಇದೆ ಎಂದು ನಾನು ಈ ಹಿಂದೆಯೇ ಹೇಳಿದ್ದೆ. ಅದು ಈಗ ನಿಜವಾಗಿದೆ ಎಂದು ಕೋಡಿಶ್ರೀ ಹೇಳಿಕೆ ನೀಡಿದ್ದಾರೆ.

ಸೋಮವಾರ ಗದುಗಿನಲ್ಲಿ ಮಾತನಾಡಿದ ಶ್ರೀಗಳು ಸಚಿವ ಕೆ.ಎನ್. ರಾಜಣ್ಣ ರಾಜೀನಾಮೆ ವಿಚಾರವಾಗಿ ಪ್ರತಿಕ್ರಿಯಿಸಿದರು.

ಅರಸನ ಅರಮನೆಗೆ ಕಾರ್ಮೋಡ ಕವಿದಿತು. ಎರಡು ತಿಂಗಳ ಹಿಂದೆಯೇ ಕೇಂದ್ರ ಹಾಗೂ ರಾಜ್ಯಕ್ಕೆ ಅಪಾಯ ಎದುರಾಗುತ್ತದೆ ಎಂದು ನಾನು ಹೇಳಿದ್ದೆ. ಅದರಂತೆ ಕೇಂದ್ರದಲ್ಲಿ ಮೊದಲು ಉಪ ರಾಷ್ಟ್ರಪತಿ ರಾಜೀನಾಮೆ ನೀಡಿದರು. ಈಗ ರಾಜ್ಯದಲ್ಲಿ ಸಚಿವ ಕೆ.ಎನ್. ರಾಜಣ್ಣ ರಾಜೀನಾಮೆ ನೀಡಿದ್ದಾರೆ. ನಾವು



ಯುಗಾದಿ ಹಾಗೂ ಸಂಕ್ರಾಂತಿ ಭವಿಷ್ಯ ಹೇಳುತ್ತೇವೆ. ರಾಜಕೀಯದಲ್ಲಿ ಕಾರ್ಮೋಡ ಇದ್ದಿದ್ದೇ ಎಂದು ಹೇಳಿದರು.

ಧರ್ಮಸ್ಥಳದ ವಿಚಾರವಾಗಿ ಮಾತನಾಡಿದ ಶ್ರೀಗಳು, ಸಮಾಚಾರ, ಪ್ರಚಾರ, ವಿಚಾರ, ಅಪಪ್ರಚಾರ ಇವುಗಳಲ್ಲಿ ಪ್ರಬಲವಾದದ್ದು ಅಪಪ್ರಚಾರ. ದುರ್ದೈವವೆಂದರೆ, ಇದರಲ್ಲಿ ಅಪಪ್ರಚಾರವೇ ಮೊದಲು ಬಂದಿದೆ. ಸತ್ಯ ಹೊರಬರುವಷ್ಟರಲ್ಲಿ ಆತ ಸತ್ತೇ ಹೊಗುತ್ತಾನೆ. ಅಳುಕು

> ಹಣೆಗೆ ವಿಭೂತಿ ಇಟ್ಟು ಹಣೆ ಕೆತ್ತಿಸ್ಯಾರು, ನಾಮ ಇಟ್ರ ಅಳಿಸ್ಯಾರು. ಇವು ಕಾಲಜ್ಞಾನದಲ್ಲಿ ಬರುತ್ತವೆ. ಧರ್ಮಕ್ಕೆ ಅವಹೇಳನ ಮಾಡುವ ಕಾಲ ಬರುತ್ತಿದೆ. ಅದನ್ನು ಧೈರ್ಯವಾಗಿ ಎದುರಿಸಿ, ಧರ್ಮವನ್ನು ಉಳಿಸಿಕೊಳ್ಳಬೇಕು ಎಂದರು.

ಹೃದಯದವನಿಗೆ ಅಪಪ್ರಚಾರವೇ ಆಯುಧ. ಸತ್ಯ ಬರುವವರೆಗೆ ಕಾದು ನೋಡಬೇಕು. ಒಳ್ಳೊಳ್ಳೆ ದೇವರ ಗುಡಿಗಳ ಪೂಜೆ ನಿಲುತ್ತಾ ಬರುತ್ತವೆ ಎಂದರು. ಸಿಎಂ ಬದಲಾವಣೆ ವಿಚಾರವಾಗಿ ಮಾತನಾಡಿ, ಹಾಲು ಕೆಟ್ಟರೂ ಹಾಲುಮತ ಕೆಡಂಗಿಲ್ಲಾ ಎಂದು ನಾನು ಈ ಹಿಂದೆ ಹೇಳಿದ್ದೆ. ಹಾಗಾಗಿ ಹಾಲುಮತದವರಿಗೆ ಅಧಿಕಾರ ಬಂದರೆ ವಾಪಸ್ ಕಸಿದುಕೊಳ್ಳೋದು ಕಷ್ಟ. ಅವರಾಗಿಯೇ ಅಧಿಕಾರವನ್ನು ಬಿಡಬೇಕು. ಹಕ್ಕ–ಬುಕ್ಕರು ವಿಜಯನಗರ ಸಾಮ್ರಾಜ್ಯ ಸ್ಥಾಪಿಸಿದವರು. ಛತ್ರಪತಿ ಶಿವಾಜಿ ಹಾಲುಮತದವರೇ. ಹಾಲುಮತದವರಿಂದ ಸಮಾಜದಲ್ಲಿ ಲೋಕೋತ್ತರ ಕಾಣಿಕೆಗಳಿವೆ. ಅವರಿಗೆ ಒಂದು ರೀತಿಯ ದೈವ ಬಲವಿದೆ. ಚುನಾವಣೆಯಲ್ಲಿ ಮೊದಲ ಮತವನ್ನು ಕೂಡಾ ಹಾಲುಮತದವರಿಂದ ಹಾಕಿಸುತ್ತಾರೆ ಎಂದರು. ನಾನು ಸಿದ್ದರಾಮಯ್ಯ ಅವರ ಬಗ್ಗೆ ಹೇಳಿಲ್ಲ. ಹಾಲುಮತದವರಿಗೆ ಅಧಿಕಾರ ಬಂದರೆ ಬಿಡಿಸಿಕೊಳ್ಳುವದು ಕಷ್ಟ. ಅವರಾಗಿಯೇ ಬಿಡಬೇಕು. ಕಳೆದ ಬಾರಿ 5 ವರ್ಷ ಸಿಎಂ ಆಗಿದ್ದರು. ನಾನು ವ್ಯಕ್ತಿ ಬಗ್ಗೆ ಹೇಳಿಲ್ಲ, ಸಮಾಜದ ಬಗ್ಗೆ ಹೇಳಿದ್ದೇನೆ ಎಂದರು.

### ಜ. ರೇಣುಕಾಚಾರ್ಯ ಸಂಸ್ಕೃತ ಪಾಠಶಾಲೆ ವತಿಯಿಂದ 'ಸಂಸ್ಕೃತ ಸಪ್ತಾಹ'

# ಸಂಸ್ಕೃತ ದೇಶದ ಸಂಸ್ಕೃತಿಯ ಪ್ರತೀಕ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಭಾರತೀಯ ಭಾಷೆಗಳಿಗೆಲ್ಲ ಮೂಲಾಧಾರವಾದ ಸಂಸ್ಕೃತ ಕೇವಲ ಭಾಷೆಯಾಗಿರದೇ ಅದು ದೇಶದ ಸಂಸ್ಕೃತಿಯ ಪ್ರತೀಕವಾಗಿದೆ. ಭಾಷೆ ಎಷ್ಟೇ ಶ್ರೀಮಂತ–ಶ್ರೇಷ್ಠವಾಗಿದ್ದರೂ ಆ ಭಾಷೆ ನಿಂತ ನೀರಾಗಿರದೇ ನದಿಯಂತೆ ಸದಾ ಪ್ರವಹಿಸುತ್ತಿರಬೇಕು ಎಂದು ಕರ್ನಾಟಕ ರಾಜ್ಯ ಸಂಸ್ಕೃತ ವಿಶ್ವವಿದ್ಯಾಲಯದ ಧಾರವಾಡ ವಲಯ ಸಂಯೋಜಕ ಬಿ.ಬಿ. ಆರೇರ ಹೇಳಿದರು.

ಪಟ್ಟಣದ ತಾಯಿ ಪಾರ್ವತಿ ಮಕ್ಕಳ ಬಳಗದ ಸಭಾಂಗಣದಲ್ಲಿ ಸೋಮವಾರ ಬೆಂಗಳೂರಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ, ಲಕ್ಷ್ಮೇಶ್ವರದ ತಾಯಿ ಪಾರ್ವತಿ ಮಕ್ಕಳ ಬಳಗ, ಜಗದ್ಗುರು ರೇಣುಕಾಚಾರ್ಯ ಸಂಸ್ಕೃತ ಪಾಠಶಾಲೆ ವತಿಯಿಂದ ಹಮ್ಮಿಕೊಂಡಿದ್ದ 'ಸಂಸ್ಕೃತ ಸಪ್ತಾಹ' ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕಿ ಲಲಿತಕ್ಕ ಕೆರಿಮನಿ ಸಂಗ್ರಹಿಸಿದ ಸಂಸ್ಕೃತ ಭಾಷೆಯ ಎರಡು ಪುಸ್ತಕಗಳನ್ನು ಬಿಡುಗಡೆ ಮಾಡಿ ▸▸ 4ನೇ ಪುಟಕ್ಕೆ

> ಸಾಹಿತಿ ಲಲಿತಕ್ಕ ಕೆರಿಮನಿ ಮಾತನಾಡಿ, ನಮ್ಮ ಬದುಕಿಗೆ ಮಾರ್ಗದರ್ಶನ ಆಗಬಲ್ಲ ಸಂಸ್ಕೃತದ ನೂರಾರು ಶ್ಲೋಕಗಳನ್ನು ಕನ್ನಡೀಕರಿಸಿದ್ದೇನೆ. ಮಕ್ಕಳೂ ಸೇರಿ ಎಲ್ಲರಿಗೂ ಅನುಕೂಲವಾಗಲಿ ಎಂಬ ಕಾರಣಕ್ಕಾಗಿ ಜ್ಞಾನ, ಧರ್ಮಕ್ಕೆ ಸಂಬಂಧಿಸಿದ ಹಾಗೂ ಸಜ್ಜನರ ಮಹತ್ವ ಎಷ್ಟು ಎಂಬುದನ್ನು ಬಿಂಬಿಸುವ ಶ್ಲೋಕಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಎರಡು ಪುಸ್ತಕಗಳನ್ನು ರಚಿಸಿದ್ದೇನೆ. ಪುಸ್ತಕಗಳಲ್ಲಿನ ಶ್ಲೋಕಗಳನ್ನು ಮಕ್ಕಳು ಪ್ರತಿದಿನ ಪಠಣ ಮಾಡಿದರೆ ಅವರಲ್ಲಿ ಜ್ಞಾನದ ಜತೆಗೆ ಸಂಸ್ಕಾರವೂ ಬೆಳೆಯುತ್ತದೆಎಂದು ಹೇಳಿದರು.

### ಪತ್ರಿಕಾಗೋಷ್ಠಿಯಲ್ಲಿ ಮಾದಿಗ ಸಮುದಾಯದ ಮುಖಂಡ ಉಡಚಪ್ಪ ಹಳ್ಳಿಕೇರಿ

# ಒಳ ಮೀಸಲಾತಿ ಜಾರಿಯಾಗದಿದ್ದರೆ ಉಗ್ರ ಹೋರಾಟ




■ ವಿಜಯಸಾಕ್ಷಿ ಸುದ್ದಿ, ಗದಗ

ಸುಪ್ರೀಂ ಕೋರ್ಟ್ ಒಳ ಮೀಸಲಾತಿ ಜಾರಿಗೊಳಿಸುವ ಹಕ್ಕನ್ನು ಆಯಾ ರಾಜ್ಯಗಳಿಗೆ ನೀಡಿದೆ. ಅದರಂತೆ ಹರಿಯಾಣ, ಪಂಜಾಬ್, ತೆಲಂಗಾಣ ಸೇರಿ ನಾಲ್ಕು ರಾಜ್ಯಗಳಲ್ಲಿ ಈಗಾಗಲೇ ಒಳ ಮೀಸಲಾತಿ ಜಾರಿಯಾಗಿದೆ. ಆದರೆ, ಕರ್ನಾಟಕದಲ್ಲಿ ಇದೂವರೆಗೂ ಜಾರಿಗೆ ಬಂದಿಲ್ಲ. ಮಾದಿಗ ಸಮುದಾಯಕ್ಕೆ ಶೇ.6ರಷ್ಟು ಒಳ ಮಿಸಲಾತಿ ನೀಡಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ಮಾಡಲಾಗುವದು ಎಂದು ಸಮುದಾಯದ ಮುಖಂಡ ಉಡಚಪ್ಪ ಹಳ್ಳಿಕೇರಿ ಆಗ್ರಹಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನ್ಯಾ. ಚಂದ್ರಚೂಡ ಅವರು ಒಳ ಮೀಸಲಾತಿ ಆದೇಶ ಮಾಡಿ ಒಂದು ವರ್ಷ ಕಳೆದಿದೆ. ದೇಶದ ನಾಲ್ಕು ರಾಜ್ಯಗಳಲ್ಲಿ ಈಗಾಗಲೇ ಅನಷ್ಠಾನ ಮಾಡಿ ಶೋಷಿತರ ಬೆಂಬಲಕ್ಕೆ ನಿಲ್ಲಲಾಗಿದೆ. ರಾಜ್ಯ ಸರಕಾರ ದತ್ತಾಂಶದ ನೆಪ ಇಟ್ಟುಕೊಂಡು ಇದುವರೆಗೂ ಒಳ ಮೀಸಲಾತಿ ಜಾರಿ ಮಾಡಿಲ್ಲ. ಸಿಎಂ ಸಿದ್ದರಾಮಯ್ಯ ನಾನು ಶೋಷಿತರ ಪರ ಎಂದು ಭಾಷಣ ಮಾಡಿ ಈಗ ಅಧಿಕಾರ ಅನುಭವಿಸುತ್ತಿದ್ದಾರೆ. ಆ.16ರಂದು ನಡೆಯಲಿರುವ ಅಧಿವೇಶನದಲ್ಲಿ ಒಳ ಮೀಸಲಾತಿ ಘೋಷಿಸಬೇಕು ಎಂದು ಒತ್ತಾಯಿಸಿದರು. ▸▸ 3ನೇ ಪುಟಕ್ಕೆ

> ಬೆಂಗಳೂರಿನಲ್ಲಿ ಮೀಸಲಾತಿಗಾಗಿ ಸೋಮವಾರದಿಂದ ಪ್ರತಿಭಟನೆ ನಡೆಯುತ್ತಿದೆ. ಜಿಲ್ಲೆಯಿಂದ ನೂರಾರು ಸಂಖ್ಯೆಯಲ್ಲಿ ಸಮಾಜ ಬಾಂಧವರು ಪ್ರತಿಭಟನೆಯಲ್ಲಿ ಭಾಗವಹಿಸುತ್ತೇವೆ. ಅಧಿವೇಶನದಲ್ಲಿ ಕಾನೂನು ಸಚಿವ ಎಚ್.ಕೆ. ಪಾಟೀಲ ಮೀಸಲಾತಿ ಬಗ್ಗೆ ಪ್ರಸ್ತಾಪಿಸಬೇಕು. ಇಲ್ಲದಿದ್ದರೆ ಜಿಲ್ಲೆಯಲ್ಲಿ ಅವರಿಗೆ ಕಪ್ಪು ಪಟ್ಟಿ ಪ್ರದರ್ಶಿಸುವ ಬಗ್ಗೆ ಮುಂದಿನ ಸಭೆಯಲ್ಲಿ ಚರ್ಚಿಸಲಾಗುತ್ತದೆ.
>
> – ಅಶೋಕ ಕುಡತಿನ್ನಿ.
> ಸಮಾಜದ ಮುಖಂಡ.

### ನಗರದ ದುಂಡಪ್ಪ ಮಾನ್ವಿ ಮಹಿಳಾ, ಮಕ್ಕಳ ಆಸ್ಪತ್ರೆಗೆ ಸಚಿವ ಎಚ್.ಕೆ. ಪಾಟೀಲ ಭೇಟಿ

# ವೈದ್ಯಕೀಯ ಸೇವೆಯನ್ನು ತ್ವರಿತಗತಿಯಲ್ಲಿ ದೊರಕಿಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ಬಡ ಮಹಿಳೆಯರು ಮತ್ತು ಮಕ್ಕಳಿಗೆ ವೈದ್ಯಕೀಯ ಸೇವೆ ತ್ವರಿತಗತಿಯಲ್ಲಿ ದೊರಕಬೇಕು. ಅವರು ಚಿಕಿತ್ಸೆಯಿಂದ ವಂಚಿತರಾಗಬಾರದು ಎಂದು ರಾಜ್ಯದ ಕಾನೂನು, ಪ್ರವಾಸೋದ್ಯಮ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಕೆ. ಪಾಟೀಲ್ ತಿಳಿಸಿದರು.

ನಗರದ ದುಂಡಪ್ಪ ಮಾನ್ವಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ರವಿವಾರ ದುಂಡಪ್ಪ ಮಾನ್ವಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ಕೆ.ಎಚ್. ಪಾಟೀಲ ವೈದ್ಯಕೀಯ ವಿಜ್ಞಾನ ಸಂಸ್ಥೆಗಳ ಕುಂದು–ಕೊರತೆ ಸಭೆ ಜರುಗಿಸಿ ಅವರು ಮಾತನಾಡಿದರು.

ಜಿಲ್ಲಾ ಉಸ್ತುವಾರಿ ಸಚಿವರು ಆಸ್ಪತ್ರೆಯಲ್ಲಿ ದಾಖಲಾದ ರೋಗಿಗಳು ಹಾಗೂ ಅವರ ಸಂಬಂಧಿಕರೊಂದಿಗೆ ಮಾತನಾಡಿ, ಮೂಲಭೂತ ಸೌಕರ್ಯಗಳು ಒದಗುತ್ತಿರುವ



ಕುರಿತು ಹಾಗೂ ಕುಂದು–ಕೊರತೆಗಳನ್ನು ಆಲಿಸಿದರು.

ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಬಸವನಗೌಡ ಕರಿಗೌಡರ ಮಾತನಾಡಿ, ಪ್ರತಿದಿನ 80ರಿಂದ 100 ಒಪಿಡಿ ಹೊರರೋಗಿಗಳ ವಿಭಾಗದಲ್ಲಿ ಬಾಣಂತಿಯರು ಹಾಗೂ ಸ್ತ್ರೀ ರೋಗಿಗಳು ಸೇವೆಯನ್ನು ಪಡೆಯುತ್ತಾರೆ. ಸಂತಾನ ಹರಣ ಶಸ್ತ್ರ ಚಿಕಿತ್ಸೆ 200ರಿಂದ 300 ಸೇವೆಯನ್ನು ಪಡೆಯುತ್ತಾರೆ. ಒಂದು ವರ್ಷದಲ್ಲಿ ಒಟ್ಟು 500ರಿಂದ 600 ವರೆಗೆ ಹೆರಿಗೆ ಚಿಕಿತ್ಸೆ ಮಾಡಲಾಗುತ್ತಿದೆ ಎಂದು ಅಂಕಿ–ಅಂಶವನ್ನು ಸಭೆಗೆ ತಿಳಿಸಿದರು.

ಜಿಲ್ಲಾ ಕೇಂದ್ರದಲ್ಲಿ ಹೆರಿಗೆ ಆಸ್ಪತ್ರೆಗೆ ಬರುವ ಹೆರಿಗೆ/ಗರ್ಭಿಣಿ ತಾಯಂದಿರು ಸಹಜ ಹೆರಿಗೆಯು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ, ತಾಲೂಕು ಆರೋಗ್ಯ ಕೇಂದ್ರದಲ್ಲಿ ನಡೆಯುತ್ತವೆ. ಸಹಜ ಹೆರಿಗೆ ಆಗದೆ ಇರುವ ಗರ್ಭಿಣಿ ತಾಯಂದಿರಿಗೆ ಗದಗ ಕೇಂದ್ರ ಸ್ಥಾನದಲ್ಲಿರುವ ಮಾನ್ವಿ ದುಂಡಪ್ಪ ಮಹಿಳಾ ಮತ್ತು ಮಕ್ಕಳ ಹೆರಿಗೆ ಆಸ್ಪತ್ರೆಗೆ ಕಳುಹಿಸಲಾಗುತ್ತದೆ. 4.30 ಗಂ–ಟೆಯ ನಂತರದ ಅವಧಿಯಲ್ಲಿ ಸಾಯಂಕಾಲ ಅರವಳಿಕೆ ತಜ್ಞರು ಇಲ್ಲದೆ ಇರುವ ಕಾರಣ, ಕೆ.ಎಚ್. ಪಾಟೀಲ ಸರ್ಕಾರಿ ಆಸ್ಪತ್ರೆಗೆ ಹೆರಿಗೆ ಚಿಕಿತ್ಸೆಗೆ ಹೋಗುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು.

ಕೆ.ಎಚ್. ಪಾಟೀಲ ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ಡಾ. ಬಸವರಾಜ ಬೊಮ್ಮನಹಳ್ಳಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಎಸ್.ಎಸ್. ನೀಲಗುಂದ ಅವರು ಆಸ್ಪತ್ರೆಗಳಲ್ಲಿನ ಕುಂದು–ಕೊರತೆಗಳ ನಿವಾರಣೆಗೆ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು. ▸▸ 3ನೇ ಪುಟಕ್ಕೆ

> ಆಸ್ಪತ್ರೆಯಲ್ಲಿ ರೋಗಿಗಳಿಗೆ ಮೂಲಭೂತ ಸೌಲಭ್ಯದ ಕೊರತೆಯಾಗದಂತೆ ನೋಡಿಕೊಳ್ಳಬೇಕು. ಆಸ್ಪತ್ರೆಯ ಒಳಗಡೆ ಹಾಗೂ ಹೊರಗಡೆ ಆವರಣ ಸ್ವಚ್ಛತೆಯಿಂದ ಕೂಡಿರುವಂತೆ ಕ್ರಮ ವಹಿಸಬೇಕು. ಆಸ್ಪತ್ರೆಗೆ ಬಂದ ರೋಗಿಗಳ ಸಮಸ್ಯೆಗಳಿಗೆ ಸ್ಪಂದಿಸಿ ಚಿಕಿತ್ಸೆ ನೀಡಬೇಕು ಎಂದು ಸಚಿವ ಎಚ್.ಕೆ. ಪಾಟೀಲ ನಿರ್ದೇಶನ ನೀಡಿದರು.

## ಸಂಪಾದಕೀಯ

# ಸಹಕಾರಿ ರಾಜಕಾರಣಿಯ ರಾಜಕೀಯ ಇತಿಶ್ರೀ

ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಮತ್ತು ಸಿದ್ದರಾಮಯ್ಯ ಸಂಪುಟದಲ್ಲಿ ಸಹಕಾರ ಸಚಿವರಾಗಿದ್ದ ಕೆ.ಎನ್. ರಾಜಣ್ಣ ಅವರ ರಾಜೀನಾಮೆ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಸಹಕಾರಿ ಕ್ಷೇತ್ರದಿಂದ ತಮ್ಮ ರಾಜಕೀಯ ಜೀವನ ಆರಂಭಿಸಿದ ರಾಜಣ್ಣ, ನಾಲ್ಕು ಬಾರಿ ಶಾಸಕರಾಗಿ ಮತ್ತು ವಿಧಾನ ಪರಿಷತ್ ಸದಸ್ಯರಾಗಿ ಸೇವೆ ಸಲ್ಲಿಸಿರುವುದು ಅವರ ಸುದೀರ್ಘ ರಾಜಕೀಯ ಹಿನ್ನೆಲೆಗೆ ಸಾಕ್ಷಿಯಾಗಿದೆ.

ಸಹಕಾರ ಕ್ಷೇತ್ರ ಮತ್ತು ರಾಜಕೀಯ ಎರಡರಲ್ಲೂ ಅಪಾರ ಅನುಭವ ಹೊಂದಿದ್ದ ಅವರ ರಾಜೀನಾಮೆ, ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿದೆ.

ರಾಜೀನಾಮೆಗೆ ಮುಖ್ಯ ಕಾರಣ ಅವರ ನಿರಂತರ ಪಕ್ಷ ವಿರೋಧಿ ಹೇಳಿಕೆಗಳು ಮತ್ತು ಪಕ್ಷಕ್ಕೆ ಮುಜುಗರ ತಂದಂತಹ ಚಟುವಟಿಕೆಗಳು ಎಂದು ಹೇಳಲಾಗುತ್ತಿದೆ.

ಕೆಪಿಸಿಸಿ ಅಧ್ಯಕ್ಷರ ಆಯ್ಕೆಯಿಂದ ಹಿಡಿದು ಮುಖ್ಯಮಂತ್ರಿ ಬದಲಾವಣೆಯವರೆಗೂ ಅವರು ನೀಡಿದ ಹೇಳಿಕೆಗಳು ಪಕ್ಷದೊಳಗಿನ ಅಸಮಾಧಾನವನ್ನು ಹೊರಹಾಕಿದಂತಿದ್ದವು. ಇತ್ತೀಚೆಗೆ ಹನಿ-ಟ್ರ್ಯಾಪ್ ಮತ್ತು ಸೆಪ್ಟೆಂಬರ್ ಕ್ರಾಂತಿ ಕುರಿತ ಅವರ ಹೇಳಿಕೆಗಳು ಮತ್ತಷ್ಟು ವಿವಾದಕ್ಕೆ ಕಾರಣವಾಗಿದ್ದವು.

ಒಬ್ಬ ಅನುಭವಿ ನಾಯಕ ತಮ್ಮದೇ ಪಕ್ಷದ ವಿರುದ್ಧ ನಿರಂತರವಾಗಿ ಹೇಳಿಕೆಗಳನ್ನು ನೀಡುತ್ತಿರುವುದು ರಾಜಕೀಯ ವ್ಯವಸ್ಥೆಯ ವಿಚಿತ್ರತೆಯನ್ನೇ ತೋರಿಸುತ್ತದೆ. ಆಂತರಿಕ ಭಿನ್ನಾಭಿಪ್ರಾಯಗಳನ್ನು ಪಕ್ಷದ ವೇದಿಕೆಗಳಲ್ಲಿ ಬಗೆಹರಿಸಿಕೊಳ್ಳುವ ಬದಲು, ಸಾರ್ವಜನಿಕವಾಗಿ ಪ್ರಕಟಿಸುವುದು ಯಾವ ಪಕ್ಷಕ್ಕೂ ಒಳಿತಲ್ಲ.

ರಾಜಣ್ಣ ಅವರ ರಾಜಕೀಯ ಪ್ರಯಾಣದ ಇತಿಶ್ರೀ, ರಾಜಕೀಯದಲ್ಲಿ ಪಕ್ಷದ ಶಿಸ್ತು ಮತ್ತು ಬದ್ಧತೆ ಎಷ್ಟು ಮುಖ್ಯ ಎಂಬುದನ್ನು ಎತ್ತಿ ತೋರಿಸುತ್ತದೆ. ಈ ಘಟನೆಯು ರಾಜಕೀಯ ನಾಯಕರಿಗೆ ಒಂದು ಪಾಠವಾಗಿದ್ದು, ಸಿದ್ಧಾಂತ ಮತ್ತು ಸಮಷ್ಟಿ ಹಿತಾಸಕ್ತಿಗಳಿಗಿಂತ ವೈಯಕ್ತಿಕ ಹೇಳಿಕೆಗಳು ಪಕ್ಷಕ್ಕೆ ಹಾನಿ ಉಂಟುಮಾಡಬಹುದು ಎಂಬುದನ್ನು ಮನದಟ್ಟು ಮಾಡಿಕೊಡುತ್ತದೆ.

## ಸಂಸ್ಕೃತ ಸಪ್ತಾಹ, ಸಂಸ್ಕೃತೋತ್ಸವದ ನಿಮಿತ್ತ ವಿಶೇಷ ಲೇಖನ

# ಸಂಸ್ಕೃತ: ವಿಶ್ವದ ಜ್ಞಾನ ಸಂಪತ್ತು




ಸಂಸ್ಕೃತ' ಎಂಬ ಮೂರಕ್ಷರಗಳನ್ನು ಕೇಳಿದೊಡನೆ, ಜನರಲ್ಲಿ ಎರಡು ವಿಧದ ಪ್ರತಿಕ್ರಿಯೆಗಳು ತಕ್ಷಣವೇ ಮನಸ್ಸಿನಲ್ಲಿ ಹೊಮ್ಮುತ್ತವೆ. ಕೆಲವರು ಗೌರವದಿಂದ, ಸಂಸ್ಕೃತವೆಂದರೆ ದೇವಭಾಷೆ, ಗಿರ್ವಾಣಭಾಷಾ, ಸಕಲ ಭಾಷೆಗಳ ಜನನಿ ಎಂದು ಉಚ್ಛರಿಸುತ್ತಾರೆ. ಭಾರತದ ಭಾವೈಕ್ಯತೆ ಮತ್ತು ಸಂಸ್ಕೃತಿಯ ಏಕತೆಯ ದೃಷ್ಟಿಯಿಂದ, ಇದು ರಾಷ್ಟ್ರಭಾಷೆಯಾಗಬೇಕು, ಮನೆ ಮನೆಗಳಲ್ಲಿ ಮೊಳಗಬೇಕು ಎಂಬುದು ಸಂಸ್ಕೃತದ ಸ್ವರೂಪ, ವ್ಯಾಪ್ತಿ ಮತ್ತು ಮಹತ್ವವನ್ನು ಆಳವಾಗಿ ಅರಿತವರ ಹೃದಯಪೂರ್ವಕ ಪ್ರತಿಪಾದನೆ.

ಸಂಸ್ಕೃತವು ಕೇವಲ ಒಂದು ಭಾಷೆಯಷ್ಟೇ ಅಲ್ಲ, ಅದು ಭಾರತದ ಆತ್ಮಸಂಪತ್ತಿನ ಶಾಶ್ವತ ನಿದರ್ಶನವಾಗಿದೆ. ಪೀಳಿಗೆಯಿಂದ ಪೀಳಿಗೆ ಹರಿದು ಬಂದ ಈ ಜ್ಞಾನಗಂಗೆಯ ತಟದಲ್ಲಿ ನಿಂತಾಗ, ನಾವು ಕೇವಲ ಶಬ್ದಗಳ ಸೌಂದರ್ಯವನ್ನೇ ನೋಡುವುದಿಲ್ಲ; ಜೀವನದ ತತ್ತ್ವ, ನೈತಿಕತೆ, ಧರ್ಮ, ಕಲೆ, ವಿಜ್ಞಾನ- ಎಲ್ಲವನ್ನೂ ಆಲಂಗಿಸುವ ಅಪಾರ ಸಂಪತ್ತನ್ನು ಅನುಭವಿಸುತ್ತೇವೆ. ಸಂಸ್ಕೃತ ಸಾಹಿತ್ಯದ ಪ್ರತಿಯೊಂದು ಶ್ಲೋಕವೂ ಮಾನವತೆಯ ಶಾಶ್ವತ ಸಂದೇಶವನ್ನು ಹೊತ್ತು ತರುತ್ತದೆ.

ಭಾರತದ ಋಷಿ-ಮುನಿಗಳು ರಚಿಸಿದ ವೇದ, ಉಪನಿಷತ್ತುಗಳು, ಪುರಾಣಗಳು, ಇತಿಹಾಸಗಳು, ಕಾವ್ಯಗಳು, ನಾಟಕಗಳು ಸಂಸ್ಕೃತದಲ್ಲಿ ಮೂಡಿ ಬಂದ ಅಮರ ಕೃತಿಗಳು. ವೈದ್ಯಶಾಸ್ತ್ರದಲ್ಲಿ ಚರಕ-ಸಂಹಿತೆ, ಶಲ್ಯಶಾಸ್ತ್ರದಲ್ಲಿ ಸುಶ್ರುತ, ಗಣಿತದಲ್ಲಿ ಆರ್ಯಭಟ, ಖಗೋಳಶಾಸ್ತ್ರದಲ್ಲಿ ವರಾಹಮಿಹಿರ ಮಹಾಕೃತಿಗಳು ಸಂಸ್ಕೃತ ಭಾಷೆಯ ಅಡಿಪಾಯದಲ್ಲೇ ಅರಳಿವೆ. ವಿಶ್ವದ ಅನೇಕ ರಾಷ್ಟ್ರಗಳ ಪಂಡಿತರು ಇಂದು ಕೂಡ ಈ ಗ್ರಂಥಗಳನ್ನು ಅಧ್ಯಯನ ಮಾಡಿ, ನವೀನ ಸಂಶೋಧನೆಗಳಿಗೆ ಮಾರ್ಗದರ್ಶನ ಪಡೆಯುತ್ತಿದ್ದಾರೆ.

ಕೆಲವರ ದೃಷ್ಟಿಯಲ್ಲಿ ಸಂಸ್ಕೃತವು ಶೋಷಕರ ಭಾಷೆ. ಗೊಡ್ಡು ಕಂದಾಚಾರಗಳು, ಮೂಢನಂಬಿಕೆಗಳು ಹಾಗೂ ಜಡಪಂಥೀಯ ಪರಂಪರೆಯನ್ನು ಪೋಷಿಸಿಕೊಂಡು ಬಂದಿರುವ ಪಟ್ಟಭದ್ರ ಹಿತಾಸಕ್ತರ ಭಾಷೆ. 'ಈ ಭಾಷೆಯಿಂದ ವೈಜ್ಞಾನಿಕ ಪ್ರಗತಿ ಅಸಾಧ್ಯ' ಎಂದು ತಮ್ಮನ್ನು ಪ್ರಗತಿಪರರೆಂದು ಭಾವಿಸುವವರು ವಾದಿಸುತ್ತಾರೆ. ಇದನ್ನೇ ಇನ್ನೂ ಮುಂದೆ ತೆಗೆದುಕೊಂಡು, ಈ ಭಾಷೆಯನ್ನು ದೇಶದಿಂದಲೇ ಉಚ್ಚಾಟಿಸಬೇಕು' ಎಂಬ ಮನಸ್ಥಿತಿಯವರೂ ನಮ್ಮಲ್ಲಿದ್ದಾರೆ.

ಆದರೆ ನಿಜವಾಗಿ ನೋಡಿದರೆ, ಮೇಲಿನ ಎರಡೂ ವಾದಗಳು ಭಾವೋದ್ವೇಗಕ್ಕೆ ಒಳಗಾದ ಅತಿರೇಕದ ಹೇಳಿಕೆಗಳಾಗಿವೆ. ಇಂತಹ ತಿರಸ್ಕಾರಗಳಲ್ಲೂ ಅತಿಸ್ತುತಿಗಳಲ್ಲೂ ಸಿಕ್ಕಿಬಿದ್ದರೆ, ಈ ಭಾಷೆಯ ನಿಜವಾದ ಮಹಿಮೆ, ಶ್ರೇಷ್ಠತೆ ಮತ್ತು ವ್ಯಾಪಕತೆಯನ್ನು ಅರಿಯುವುದು ಅಸಾಧ್ಯ. ದೇಶದಲ್ಲಿ ಸಂಸ್ಕೃತದ ಸ್ಥಾನಮಾನವನ್ನು ಸಮಗ್ರವಾಗಿ ಅರಿಯಲು, ಸಮಚಿತ್ತತೆ, ಪಕ್ವತೆ ಮತ್ತು ನಿಷ್ಪಕ್ಷಪಾತವಾದ ಮನೋಭಾವ ಅಗತ್ಯ.

ಭಾರತದಲ್ಲಿ ಜನಿಸಿದ ಅನೇಕ ಸಂಜಾತ ಭಾಷೆಗಳ ಪೈಕಿ ಸಂಸ್ಕೃತವು ಕಾಲದ ಅಲೆಗಳ ನಡುವೆಯೂ ಅಚಲವಾಗಿ ನಿಂತಿರುವ, ಅತ್ಯಂತ ಪ್ರಾಚೀನ ಮತ್ತು ಗೌರವಾನ್ವಿತ ಭಾಷೆ. ಇದರ ಮಹಿಮೆಯು ಇಂದು ಭಾರತಕ್ಕೆ ಮಾತ್ರ ಸೀಮಿತವಾಗದೆ, ಜಗತ್ತಿನ ಅನೇಕ ಭಾಗಗಳಿಗೆ ಹರಡಿರುವುದು ನಮ್ಮ ಗರ್ವದ ವಿಷಯ. ಹಿಂದಿನ ಶತಮಾನಗಳಲ್ಲಿ, ಬಲಾಢ್ಯ ದೇಶಗಳಾದ ಇಂಗ್ಲೆಂಡ್, ಫ್ರಾನ್ಸ್, ಪ್ಯಾರಿಸ್ ಮುಂತಾದ ರಾಷ್ಟ್ರಗಳಿಗೂ ಇದರ ಕೀರ್ತಿಯ ಅಲೆ ತಲುಪಿತ್ತು. 1883ರಲ್ಲಿ ಇಂಗ್ಲೆಂಡ್‌ನ ಆಕ್ಸ್‌ಫರ್ಡ್ ನಗರದಲ್ಲಿ ಸ್ಥಾಪಿಸಲಾದ ಇಂಡಿಯನ್ ಇನ್‌ಸ್ಟಿಟ್ಯೂಟ್ ಎಂಬ ಸಂಸ್ಥೆ ಇದರ ಜೀವಂತ ಸಾಕ್ಷಿ. ಆ ಸಂಸ್ಥೆಯ ಉದ್ಘಾಟನೆಯನ್ನು ಸ್ವತಃ ಇಂಗ್ಲೆಂಡ್‌ನ ರಾಜಕುಮಾರ ಪ್ರಿನ್ಸ್ ಆಫ್ ವೇಲ್ಸ್ ನೆರವೇರಿಸಿದರು.

'ವಸುದೈವ ಕುಟುಂಬಕಮ್' ಇದು ಕೇವಲ ಶಬ್ದವಲ್ಲ, ಮಾನವಕೋಟಿಯ ಹೃದಯವನ್ನು ಜೋಡಿಸುವ ದಿವ್ಯ ಮಂತ್ರ. ಈ ಮಂತ್ರದ ಜೀವಂತ ಸಾಕ್ಷಿಯಾದ ಸಂಸ್ಕೃತಭಾಷೆಯ ಅಧ್ಯಯನ ಅಧ್ಯಾಪನ ಹಾಗೂ ಸಂಶೋಧನೆಯ ಜ್ಯೋತಿ, ಇಂದಿನ ಜಗತ್ತಿನ ಎಲ್ಲ ದಿಕ್ಕುಗಳಲ್ಲಿ ಪ್ರಕಾಶಿಸುತ್ತಿದೆ. ಟೊರಿನೋ, ಪ್ಯಾರಿಸ್, ವೈಯಾರ್, ಫಿಲಡೆಲ್ಫಿಯಾ, ಲೈಡನ್, ವಿಯನ್ನಾ, ಈ ಮಹಾನಗರಗಳಲ್ಲಿ ನಡೆದ ವಿಶ್ವ ಸಂಸ್ಕೃತ ಸಮ್ಮೇಳನಗಳ ವೇದಿಕೆ ಮೇಲೆ, ಭಾರತೀಯ ಪಂಡಿತರಿಗಿಂತ ವಿದೇಶಿ ವಿದ್ವಾಂಸರೇ ಹೆಚ್ಚು, ಹೃದಯದಿಂದ ಬಂದು ತಲೆಯೆತ್ತಿ ಕುಳಿತಿದ್ದರು ಇದು ಸಂಸ್ಕೃತ ಜಗತ್ತಿನ ಹೃದಯಕ್ಕೆ ತಲುಪಿದ ಪ್ರೀತಿ.

ಇಂದಿನ ಜಗತ್ತು ಅಮೇರಿಕೆಯಿಂದ ಯುಗೋಸ್ಲಾವಿಯಾ ವರೆಗೂ, ಜಪಾನ್‌ನಿಂದ ಫ್ರಾನ್ಸ್ ವರೆಗೂ ಸಂಸ್ಕೃತ ಬೋಧನೆಯ ಮಂದಿರಗಳನ್ನು ನಿರ್ಮಿಸಿದೆ. ಓರಿಯಂಟಲ್ ಸೊಸೈಟಿಯ ಪವಿತ್ರ ಪುಟಗಳಲ್ಲಿ ಸಂಸ್ಕೃತದ ನಾದ ಹರಿಯುತ್ತಿದೆ. ಶೃಂಗೇರಿಯ ನಿಷ್ಕಲ್ಮಶ ವಾತಾವರಣದಲ್ಲಿ, ವಿದೇಶಿಗರು ಶಿಷ್ಯರಂತೆ ಕುಳಿತು, ಋಷಿಗಳ ಭಾಷೆಯನ್ನು ಅಧ್ಯಯನ ಮಾಡುತ್ತಾರೆ. ಯಾವುದೇ ಬಲಾತ್ಕಾರ, ಯಾವುದೇ ಲಾಲಸೆ ಇಲ್ಲ ಕೇವಲ ಜ್ಞಾನದ ಮೋಹಿನಿ ಆಕರ್ಷಣೆಯೇ ಅವರನ್ನು ಸೆಳೆದಿದೆ.

ಸಕಲ ಪೂರ್ವಾಗ್ರಹ ಪರದೆಯನ್ನು ತೆರೆದು, ಸಂಸ್ಕೃತ ಸಾಹಿತ್ಯಸಿಂಧುವಿನತ್ತ ದೃಷ್ಟಿ ಹರಿಸಿದ ಕ್ಷಣ, ಮನಮುಟ್ಟುವಂತೆ ಹೊಳೆಯುವದು- ವಿಶ್ವಜ್ಞಾನರತ್ನಗಳ ಅಮೃತಭಂಡಾರ! ಇವು ಕೇವಲ ಗ್ರಂಥಗಳು ಮಾತ್ರವಲ್ಲ, ಲೋಕೋಪಯೋಗಿಯಾದ ನಿತ್ಯನಿಧಿಗಳು. ವಿದೇಶೀಯ ಪಂಡಿತರೂ ಸ್ವೀಕರಿಸಿರುವಂತೆ, ಇಂದಿನ ವಿಜ್ಞಾನಯುಗಕ್ಕೂ ಪ್ರಸ್ತುತವೆನಿಸುವ ಅನೇಕ ತತ್ತ್ವ ತಂತ್ರಜ್ಞಾನವಿಜ್ಞಾನಗಳು ಸಂಸ್ಕೃತಭಾಷೆಯ ಅಂತರಾಳದಲ್ಲಿ ಅಡಗಿವೆ.

ಮಹಾತ್ಮ ಗಾಂಧೀಜಿಯವರು ಹೇಳಿದಂತೆ, 'ಸಂಸ್ಕೃತವು ನಮ್ಮ ಭಾಷೆಗಳಿಗೆ ಗಂಗಾ ನದಿಯಂತಿದೆ' ಆ ಗಂಗೆಯು ಒಮ್ಮೆ ಬತ್ತಿಹೋದರೆ, ನಮ್ಮ ಎಲ್ಲಾ ಭಾಷೆಗಳ ಜೀವಸಂಚಾರವೇ ಕ್ಷೀಣಿಸುತ್ತದೆ. ಸಂಸ್ಕೃತವು ನಮ್ಮ ನಾಡಿನ ಶಿರಾ-ಧಮನಿಗಳಲ್ಲಿ ಹರಿಯುವ ಶಾಶ್ವತ ನದಿ. ಅದು ಹರಿದಂತೆ ನಮ್ಮ ಭಾಷೆಗಳೂ, ಸಂಸ್ಕೃತಿಯೂ, ಚಿಂತನೆಯೂ ಪಾವನವಾಗುತ್ತವೆ. ಭಾಷಾಶಾಸ್ತ್ರದ ನೋಟದಿಂದ ನೋಡುವುದಾದರೆ, ಇತರ ಭಾಷೆಗಳ ಹೃದಯಕ್ಕೆ ಜೀವಸಂಚಾರ ಮಾಡುವ ಚೈತನ್ಯ ಸಂಸ್ಕೃತದಲ್ಲಿದೆ.


ಸಂಸ್ಕೃತ ಕಲಿಯುವ ಹಕ್ಕು ಲಿಂಗ, ವಯಸ್ಸು, ವರ್ಣ, ಪ್ರಾಂತ್ಯದ ಗಡಿಗಳಿಂದ ಅಳೆಯಲ್ಪಡುವುದಿಲ್ಲ. ಕಲಿಯಬಯಸುವ ಮನಸ್ಸು ಇದ್ದರೆ, ಈ ಜ್ಞಾನಸಾಗರದ ಅಲೆಗಳು ಪ್ರತಿಯೊಬ್ಬರ ಪಾದಕ್ಕೆ ತಾಗುತ್ತವೆ. ಅಂತೆಯೇ, ಜ್ಞಾನವು ಯಾವ ಭಾಷೆಯಿಂದ ಹರಿದುಬಂದರೂ, ಅದು ಮನಸ್ಸನ್ನು ಬೆಳಗಿಸಿ, ಹೃದಯವನ್ನು ಉದಾರಗೊಳಿಸಿ, ಬದುಕನ್ನು ಉನ್ನತಿಗೇರಿಸಿದರೆ ಅದು ಸ್ವೀಕಾರಾರ್ಹವಲ್ಲವೆ?

ಈ ನಿಜವನ್ನು ಅರ್ಧ ಶತಮಾನಗಳ ಹಿಂದೆಯೇ ಲಕ್ಷ್ಮೇಶ್ವರದ ಪುಣ್ಯಭೂಮಿಯಲ್ಲಿ ಅರಿತುಕೊಂಡವಳು ನಕ್ಷತ್ರ ಲೋಕದ ಧ್ರುವತಾರೆಯಾದ ಶ್ರೀ ತಾಯಿ ಪಾರ್ವತಮ್ಮ. ಸಮಾಜದ ಕಟ್ಟುಪಾಡುಗಳನ್ನು ತೂರಿಹಾಕಿ, ಮಹಿಳೆಯರ ಪಾದಕ್ಕೆ ಸಂಸ್ಕೃತ ವಿದ್ಯೆಯ ಸಿಂಧುವನ್ನು ತಂದುಕೊಟ್ಟ ಆ ಧೀರಹೃದಯ.

ಶ್ರೀ ವೀರಗಂಗಾಧರರ ಆಶೀರ್ವಾದವನ್ನೆ ಬಲವನ್ನಾಗಿ ಮಾಡಿಕೊಂಡು ಅವರು ಸ್ಥಾಪಿಸಿದ ಶ್ರೀ ರೇಣುಕಾಚಾರ್ಯ ಸಂಸ್ಕೃತ ಪಾಠಶಾಲೆ ಇಂದಿಗೂ ಜ್ಞಾನ ವೃಕ್ಷದಂತೆ ಬೆಳೆಯುತ್ತಿದೆ, ಶಾಖೋಪಶಾಖೆಗಳಲ್ಲಿ ಜ್ಞಾನಪುಷ್ಪಗಳ ಸುಗಂಧವನ್ನು ಹರಡುತ್ತಿದೆ. ಇಂದು, ಆ ತಾಯಿ ಪಾರ್ವತಿ ಮಕ್ಕಳ ಬಳಗದ ಪ್ರತಿಷ್ಠಿತ ಸಂಸ್ಥೆ ಸಂಸ್ಕೃತ ಸಪ್ತಾಹ ಮತ್ತು ವಿಶ್ವ ಸಂಸ್ಕೃತ ದಿನಾಚರಣೆಯನ್ನು ಭಾವದ ಭರಿತೋತ್ಸವವನ್ನಾಗಿ, ಭಕ್ತಿ-ಸಮರ್ಪಣೆಯ ಜ್ಯೋತಿಯಾಗಿ, ಸಂಭ್ರಮಿಸುತ್ತಿದೆ. ಇದು ಕೇವಲ ಉತ್ಸವವಲ್ಲ ಭಾರತೀಯ ಮನಸ್ಸುಗಳನ್ನು ಒಂದೇ ಹೃದಯವಾಗಿ ಜೋಡಿಸುವ ಸಂಸ್ಕೃತ ಸರಸ್ವತಿಯ ಮಹಾಮಂಗಳಾರತಿ.

– ಡಾ. ಸಾಕ್ಷೀ ಎಸ್.ಮೆಣಸಿನಕಾಯಿ.
(ಎಂ.ಎ., ಪಿ.ಎಚ್.ಡಿ.-ಸಂಸ್ಕೃತ)

## ರಾಜೀನಾಮೆ ಅಲ್ಲ.. ಸಂಪುಟದಿಂದಲೇ ಕೆ.ಎನ್. ರಾಜಣ್ಣ ವಜಾ..!



■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಸಚಿವ ಸ್ಥಾನಕ್ಕೆ ಕೆ.ಎನ್. ರಾಜಣ್ಣ ಅವರು ರಾಜೀನಾಮೆ ನೀಡಿಲ್ಲ, ಬದಲಾಗಿ ಹೈಕಮಾಂಡ್ ಸೂಚನೆಯ ಮೇರೆಗೆ ಅವರನ್ನು ಸಂಪುಟದಿಂದ ವಜಾ ಮಾಡಲಾಗಿದೆ ಎಂದು ರಾಜಭವನ ಅಧಿಕೃತ ಮಾಹಿತಿ ಬಿಡುಗಡೆ ಮಾಡಿದೆ.

ಆರಂಭದಲ್ಲಿ ರಾಜಣ್ಣ ಅವರು ಸ್ವಯಂ ರಾಜೀನಾಮೆ ನೀಡಿದ್ದಾರೆ ಎಂಬ ಸುದ್ದಿ ಹರಿದಾಡಿತ್ತು. ಆದರೆ, ಹೈಕಮಾಂಡ್ ಅವರ ರಾಜೀನಾಮೆ ಪಡೆಯುವುದನ್ನು ಬಯಸದೆ, ನೇರವಾಗಿ ಸಂಪುಟದಿಂದ ವಜಾಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೂಚನೆ ನೀಡಿತ್ತು.

ಹೈಕಮಾಂಡ್‌ನ ಖಡಕ್ ಆದೇಶದಂತೆ, ಸಿಎಂ ಸಿದ್ದರಾಮಯ್ಯ ತಮ್ಮ ಆಪ್ತರಾದ ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರನ್ನು ವಜಾಗೊಳಿಸಿದ್ದಾರೆ.

ಮುಜುಗರ ತಪ್ಪಿಸಲು ರಾಜೀನಾಮೆ ಪತ್ರ ವಜಾಗೊಳಿಸುವ ಮುಜುಗರವನ್ನು ತಪ್ಪಿಸಲು ರಾಜಣ್ಣ ಅವರು ತಮ್ಮ ಪುತ್ರ, ಪರಿಷತ್ ಸದಸ್ಯ ರಾಜೇಂದ್ರ ಮೂಲಕ ಸಿಎಂಗೆ ರಾಜೀನಾಮೆ ಪತ್ರವನ್ನು ಸಲ್ಲಿಸಿದ್ದರು. ಆದರೆ ಹೈಕಮಾಂಡ್ ಖಡಕ್ ಸೂಚನೆಯ ಹಿನ್ನೆಲೆಯಲ್ಲಿ ಸಿಎಂ ರಾಜೀನಾಮೆ ಪತ್ರವನ್ನು ಅಂಗೀಕರಿಸದೇ ಸಂಪುಟದಿಂದಲೇ ವಜಾಗೊಳಿಸುವಂತೆ ರಾಜ್ಯಪಾಲರಿಗೆ ಶಿಫಾರಸು ಮಾಡಿದ್ದರು. ಸಿಎಂ ಶಿಫಾರಸಿನಂತೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ರಾಜಣ್ಣ ಅವರನ್ನು ವಜಾಗೊಳಿಸುವ ಗೆಜೆಟ್ ಅಧಿಸೂಚನೆಗೆ ಸಹಿ ಹಾಕಿದ್ದಾರೆ.

## ಸತ್ಯವಂತರಿಗೆ ಕಾಂಗ್ರೆಸ್ ನಲ್ಲಿ ಕಾಲವಿಲ್ಲ: ರಾಜಣ್ಣ ರಾಜೀನಾಮೆಗೆ ಸಚಿವೆ ಶೋಭಾ ಕರಂದ್ಲಾಜೆ ಪ್ರತಿಕ್ರಿಯೆ!

■ ವಿಜಯಸಾಕ್ಷಿ ಸುದ್ದಿ, ನವದೆಹಲಿ

ಸತ್ಯವಂತರಿಗೆ ಕಾಂಗ್ರೆಸ್ ನಲ್ಲಿ ಕಾಲವಿಲ್ಲ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದ್ದಾರೆ.

ರಾಜಣ್ಣ ಅವರ ರಾಜೀನಾಮೆ ವಿಚಾರವಾಗಿ ಮಾತನಾಡಿದ ಅವರು, ಕೆ.ಎನ್ ರಾಜಣ್ಣ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ ಎಂದು ಗೊತ್ತಾಗಿದೆ. ಕಾಂಗ್ರೆಸ್‌ನಲ್ಲಿ ಸತ್ಯವಂತರಿಗೆ ಕಾಲವಿಲ್ಲ. ರಾಹುಲ್ ಗಾಂಧಿ ಅವರ ಹೇಳಿಕೆಗೆ ರಾಜಣ್ಣ ಸತ್ಯವಾದ ಉತ್ತರ ಕೊಟ್ಟಿದ್ದರು. ಸತ್ಯದ ಅರಿವಾಗುತ್ತಿದೆ, ಸಹಜವಾಗಿ ಮಹಾದೇವಪುರದಲ್ಲಿ ಮತದಾರರು ಹೆಚ್ಚಾಗುತ್ತಿದ್ದಾರೆ. ಹೆಚ್ಚಿನ ಮತದಾನ ಅಲ್ಲಿ ಆಗುತ್ತಿದೆ. ಬಿಜೆಪಿಗೆ ಹೆಚ್ಚು ಮತ ಬಂದಿದೆ. ಪಿ.ಸಿ ಮೋಹನ್ ಗೆದ್ದಿದ್ದರು. ರಾಜಣ್ಣ ಇದೇ ಸತ್ಯ ಹೇಳಿದ್ದರು ಎಂದಿದ್ದಾರೆ.

ನಮ್ಮ ಸರ್ಕಾರ ಇತ್ತು, ನಮ್ಮದೇ ತಪ್ಪು ಎಂದು ರಾಜಣ್ಣ ಹೇಳಿದ್ದರು. ಜನರ ಪ್ರಶ್ನೆಯನ್ನೇ ಅವರು ಕೇಳಿದ್ದರು. ಸತ್ಯ ಹೇಳಿದ್ದಕ್ಕೆ ಅರಗಿಸಿಕೊಳ್ಳಲಾಗದೇ ರಾಜೀನಾಮೆ ಪಡೆಯಲಾಗಿದೆ. ರಾಹುಲ್ ಗಾಂಧಿ ಸತ್ಯ ಎಂದು ಹೇಳುತ್ತಾರೆ. ಯಾಕೆ ಅಫಿಡೆವಿಟ್ ಸಲ್ಲಿಕೆ ಮಾಡುತ್ತಿಲ್ಲ. ರಾಜಣ್ಣ ಅವರು ಸಿದ್ದರಾಮಯ್ಯ ಅವರಿಗೆ ಆಪ್ತರು. ಇವತ್ತು ಸಿದ್ದರಾಮಯ್ಯ ಅವರಿಗೂ ರಾಜಣ್ಣರನ್ನು ಉಳಿಸಿಕೊಳ್ಳಲು ಸಾಧ್ಯವಾಗಿಲ್ಲ. ಈ ಮೂಲಕ ದೇಶಕ್ಕೆ ರಾಹುಲ್ ಗಾಂಧಿಯವರ ಸುಳ್ಳು ಗೊತ್ತಾಗಿದೆ ಎಂದು ಕಿಡಿಕಾರಿದ್ದಾರೆ.

ಸತ್ಯ ಹೇಳಿದರೆ ಅಫಿಡೆವಿಟ್ ಸಲ್ಲಿಸಲು ಯಾಕೆ ಹೆದರಬೇಕು? ಅಮೇಥಿ, ರಾಜಣ್ಣಬರೇಲಿ, ಸಿದ್ದರಾಮಯ್ಯ ಅವರ ಕ್ಷೇತ್ರದಲ್ಲಿ ಮನೆ ವಿಳಾಸ ಸರಿಯಾಗಿ ಇಲ್ಲದಿದ್ದರೆ ಸೊನ್ನೆ ಎಂದು ಬರುತ್ತದೆ. ಅದನ್ನು ಸುಳ್ಳು ಮತದಾರರು ಎಂದರೆ? ಚಿಕ್ಕ ಚಿಕ್ಕ ಮನೆಯಲ್ಲಿ ಬೇರೆ ಬೇರೆ ಕಡೆಯಿಂದ

## ಡಿ. ದೇವರಾಜ ಅರಸು ಜನ್ಮದಿನಾಚರಣೆ ಪೂರ್ವಭಾವಿ ಸಭೆ



■ ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ

ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಪಟ್ಟಣದ ದೇವರಾಜ ಅರಸು ಭವನದಲ್ಲಿ ಅದ್ದೂರಿಯಾಗಿ ಆಚರಿಸಲು ಸ್ಥಳೀಯ ತಾಲೂಕು ಆಡಳಿತ ಸೌಧದಲ್ಲಿ ತಹಸೀಲ್ದಾರ ಬಿ.ವಿ. ಗಿರೀಶಬಾಬು ಅಧ್ಯಕ್ಷತೆಯಲ್ಲಿ ನಡೆದ ಪೂರ್ವಬಾವಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ಕಲಾ ಕ್ಷೇತ್ರದಲ್ಲಿ ಸಾಧನೆಗೈದ ಅರಸೀಕೆರೆ ಗ್ರಾಮದ ಭಾಗವತ ಕೆ.ಬಿ. ಷಣ್ಮುಖಪ್ಪ, ಗೊಂದಳಿ ದುರುಗಪ್ಪ ಹಾಗೂ ಚಿಗಟೇರಿಯ ಮಾಳ್ಗಿ ಆನಂದಪ್ಪ ಅವರುಗಳನ್ನು ಗೌರವಿಸಲು ತೀರ್ಮಾನಿಸಲಾಯಿತು. ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಲು ಹಾಗೂ ದೇವರಾಜ ಅರಸು ಕುರಿತು ಉಪನ್ಯಾಸ ನೀಡಲು ವಕೀಲ ಕಣವಿಹಳ್ಳಿ ಬಿ. ಮಂಜುನಾಥ ಅವರನ್ನು ಆಯ್ಕೆ ಮಾಡಲಾಯಿತು.

ದೇವರಾಜ ಅರಸು ಅವರ ಜೀವನ ಚರಿತ್ರೆ ಕುರಿತು ಭಾಷಣ, ಚಿತ್ರಕಲೆ, ಪ್ರಬಂಧ ಸ್ಪರ್ಧೆ ಆಯೋಜಿಸಲು ಸಹ ಈ ಸಂದರ್ಭದಲ್ಲಿ ನಿರ್ಣಯ ಕೈಗೊಳ್ಳಲಾಯಿತು. ಸಿದ್ದೇಶ, ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ನಾಗರಾಜ, ಪುರಸಭಾ ಆರೋಗ್ಯ ನಿರೀಕ್ಷಕ ಮಂಜುನಾಥ, ವೈದ್ಯಾಧಿಕಾರಿ ಪೃಥ್ವಿ, ಈರಣ್ಣ, ವಿವಿಧ ಸಂಘಟನೆಗಳ ಮುಖಂಡರಾದ ಗುಡಿಹಳ್ಳಿ ಹಾಲೇಶ, ಸಣ್ಣ ಅಜ್ಜಯ್ಯ, ಭೀಮಪ್ಪ, ಪುರಸಭಾ ನಾಮನಿರ್ದೇಶಿತ ಸದಸ್ಯ ಹೇಮಣ್ಣ ಮೋರಗೇರಿ, ಅರಸೀಕೆರೆಯ ಗೋಪಾಲ ಗೊಂದಲಿ, ಬಿಸಿಎಂ ಇಲಾಖೆಯ ವಿಸ್ತರಣಾಧಿಕಾರಿ ಭೀಮಪ್ಪ, ಮೇಲ್ವಿಚಾರಕ ಬಿ.ಎಚ್. ಚಂದ್ರಪ್ಪ ಮುಂತಾದವರಿದ್ದರು.

## ಅಡವಿಸೋಮಾಪೂರದ ಗೋಣಿಬಸವೇಶ್ವರ ದೇವಸ್ಥಾನದ ಜೀರ್ಣೋದ್ಧಾರ, ಮೂರ್ತಿ ಪ್ರತಿಷ್ಠಾಪನೆ ಇಂದಿನಿಂದ

# ಗೋಣಿಬಸವೇಶ್ವರರ ಮಹಾರಥೋತ್ಸವ ಆ.18ಕ್ಕೆ




■ ವಿಜಯಸಾಕ್ಷಿ ಸುದ್ದಿ, ಗದಗ

ತಾಲೂಕಿನ ಅಡವಿ ಸೋಮಾಪೂರ ಗ್ರಾಮದ ಗೋಣಿಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಆ.12ರಿಂದ 19ರವರೆಗೆ ಗೋಣಿಬಸವೇಶ್ವರ ದೇವಸ್ಥಾನದ ಜೀರ್ಣೋದ್ಧಾರ, ಮೂರ್ತಿ ಪ್ರತಿಷ್ಠಾಪನೆ, ಕಳಸಾರೋಹಣ, ಪ್ರವಚನ ಮತ್ತು ಜಾತ್ರಾ ಮಹೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಗೋಣಿಬಸವೇಶ್ವರ ಟ್ರಸ್ಟ್ ಕಮಿಟಿ ಗೌರವಾಧ್ಯಕ್ಷ ಆನಂದಪ್ಪ ಪುರದ ಹೇಳಿದರು.

ನಗರದ ಪ್ರತಿಕಾ ಭವನದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಆ.12ರಂದು ಬೆಳಗ್ಗೆ 6ಕ್ಕೆ ನಗರದ ಬನ್ನಿಕಟ್ಟಿ ದೇವಸ್ಥಾನದಿಂದ ಸಕಲ ವಾದ್ಯಗಳು, ಕುಂಭಮೇಳದೊಂದಿಗೆ ಗೋಣಿಬಸವೇಶ್ವರನ ಮೂರ್ತಿ ಹಾಗೂ ಕಳಸದ ಮೆರವಣಿಗೆಯು ಗ್ರಾಮಕ್ಕೆ ಆಗಮಿಸುವದು. ಸಾಯಂಕಾಲ 6ಕ್ಕೆ ಗೋಣಿಬಸವೇಶ್ವರರ ಚರಿತ್ರೆಯ ಪ್ರವಚನ ಆರಂಭವಾಗಲಿದೆ.

ಕೊರ್ಲಹಳ್ಳಿ ಗೋಣಿಬಸವೇಶ್ವರ ಸಂಸ್ಥಾನಮಠದ ಪಟ್ಟದ ಚಿನ್ಮಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಗ್ರಾ.ಪಂ ಅಧ್ಯಕ್ಷೆ ಪವಿತ್ರ ಹೊಸಳ್ಳಿ ಅಧ್ಯಕ್ಷತೆ ವಹಿಸುವರು. ಗ್ರಾಮೀಣ ವಲಯದ ಸಿಪಿಐ ಸಿದ್ರಾಮೇಶ್ವರ ಗಡೇದ, ಶ್ಯಾಮಸುಂದರ ಡಂಬಳ, ಈರನಗೌಡ ಹರ್ಲಾಪೂರ ಭಾಗವಹಿಸುವರು. ಆ.12 ರಿಂದ ಆ.16ರವರೆಗೆ ಪ್ರತಿ ದಿನ ಸಾಯಂಕಾಲ 6ರಿಂದ ಶಂಭುಲಿಂಗ ಶಾಸ್ತ್ರಿಗಳು ಗೋಣಿಬಸವೇಶ್ವರ ಚರಿತ್ರೆಯ ಪ್ರವಚನ ಮಾಡಲಿದ್ದಾರೆ ಎಂದರು.

ಆ.13 ರಂದು ಬೆಳಗ್ಗೆ 7.45ಕ್ಕೆ ಗೋಣಿಬಸವೇಶ್ವರರ ಮೂರ್ತಿ ಪ್ರತಿಷ್ಠಾಪನೆ, ಬೆಳಗ್ಗೆ 10ಕ್ಕೆ ಜೀರ್ಣೋದ್ಧಾರಗೊಂಡ ದೇವಸ್ಥಾನದ ಲೋಕಾರ್ಪಣೆ ಮತ್ತು ಕಳಸಾರೋಹಣ ಹಮ್ಮಿಕೊಳ್ಳಲಾಗಿದೆ. ಸಾಯಂಕಾಲ 6ಕ್ಕೆ ಪ್ರವಚನ ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕೊಪ್ಪಳ ಗವಿಮಠದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಸೋಮಶಂಕರ ಸ್ವಾಮೀಜಿ, ಕಲ್ಲಯ್ಯಜ್ಜನವರು, ಪಟ್ಟದ ಚಿನ್ಮಯ ಸ್ವಾಮೀಜಿ, ಮಲ್ಲಿಕಾರ್ಜುನ ಸ್ವಾಮೀಜಿ ಭಾಗವಹಿಸುವರು. ಮಾಜಿ ಶಾಸಕರಾದ ಬಿ.ಆರ್. ಯಾವಗಲ್ಲ, ಡಿ.ಆರ್. ಪಾಟೀಲ, ಜಿ.ಪಂ ಮಾಜಿ ಅಧ್ಯಕ್ಷ ವಾಸಣ್ಣ ಕುರಡಗಿ, ಈರಪ್ಪ ದೊಡ್ಡಮನಿ ಭಾಗವಹಿಸುವರು ಎಂದರು.

ಆ.14 ರಂದು ಸಾಯಂಕಾಲ 7.30ಕ್ಕೆ ಗೋಣಿಬಸವೇಶ್ವರ ಚರಿತ್ರೆಯ ಪ್ರವಚನ ನಡೆಯಲಿದ್ದು, ಸಾನ್ನಿಧ್ಯ ಹರ್ಲಾಪೂರ ಕೊಟ್ಟೂರೇಶ್ವರ ಕೊಟ್ಟೂರೇಶ್ವರ ಸ್ವಾಮೀಜಿ ವಹಿಸುವರು. ಮಾಜಿ ಸಚಿವ ಎಸ್.ಎಸ್. ಪಾಟೀಲ, ಕೇಶವ ದೇವಾಂಗ, ಮಲ್ಲನಗೌಡ ಪಾಟೀಲ ಭಾಗವಹಿಸುವರು. ನಂತರ ಗ್ರಾಮದ ವಿವಿಧ ಕಲಾ ತಂಡದಿಂದವರಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಆ.15 ರಂದು ಸಾಯಂಕಾಲ 7.30ಕ್ಕೆ ಗೋಣಿಬಸವೇಶ್ವರ ಚರಿತ್ರೆಯ ಪ್ರವಚನ ಮಾಡಲಾಗುತ್ತಿದೆ. ಬೈರನಹಟ್ಟಿ ವಿರಕ್ತಮಠದ ದೊರೆಸ್ವಾಮಿ ಶಾಂತಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಶಾಸಕ ಡಾ. ಚಂದ್ರ ಲಮಾಣಿ, ವೆಂಕಟೇಶ ಹೂವಣ್ಣವರ, ಶೇಖರ ಭೂಮಿ, ದೇವಪ್ಪ ದೊಡ್ಡಮನಿ, ಅಲ್ಲಸಾಬ ಕುಮನೂರ ಭಾವಗಹಿಸುವರು. ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು ಎಂದರು.


ಆ.16ರಂದು ಸಾಯಂಕಾಲ 7.30ಕ್ಕೆ ಗೋಣಿಬಸವೇಶ್ವರ ಚರಿತ್ರೆಯ ಪ್ರವಚನದ ಸಾನ್ನಿಧ್ಯವನ್ನು ಮಣಕವಾಡದ ಮೃತ್ಯುಂಜಯ ಸ್ವಾಮೀಜಿ ವಹಿಸುವರು. ಸಂಸದ ಪಿ.ಸಿ. ಗದ್ದಿಗೌಡ್ರ, ಶಾಸಕ ಸಿ.ಸಿ. ಪಾಟೀಲ, ವಿ.ಪ ಸದಸ್ಯ ಎಸ್.ವಿ. ಸಂಕನೂರ, ಡಿವೈಎಸ್ಪಿ ಮುರ್ತುಜಾ ಖಾದ್ರಿ, ಸಂಗಮೇಶ ಕೊಳ್ಳಿ ಭಾಗವಹಿಸುವರು ಎಂದರು.

ಆ.17ರಂದು ಸಾಯಂಕಾಲ 7.30ಕ್ಕೆ ಗೋಣಿಬಸವೇಶ್ವರ ಚರಿತ್ರೆಯ ಪ್ರವಚನದ ಸಾನ್ನಿಧ್ಯ ಬೂದಿಶ್ವರಮಠದ ಅಭಿನವ ಬೂದಿಶ್ವರ ಸ್ವಾಮೀಜಿ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ, ಮಾಜಿ ಶಾಸಕ ಬಿ.ಆರ್. ಯಾವಗಲ್ಲ, ಸಿದ್ದಲಿಂಗೇಶ ಪಾಟೀಲ, ಮಹೇಶ ಹರ್ಲಾಪೂರ, ಬಸವರಾಜ ಈರಜನವರ ಭಾಗವಹಿಸುವರು ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಈರಪ್ಪ ಮೌರ್ಯ, ಅಲ್ಲಾಸಾಬ ಕುಮ್ಮನೂರ, ಈರಪ್ಪ ಗುರಗಣ್ಣವರ, ಸಿದ್ದಪ್ಪ ಸಿದ್ನೇಕೊಪ್ಪ, ಮಂಜುನಾಥ ನಾಗಾವಿ, ಬಸವರಾಜ ಈ, ಹುಚ್ಚೀರಪ್ಪ ಹರ್ತಿ, ಅಮರೇಶ ಜಕ್ಕಮ್ಮನವರ, ಮಂಜುನಾಥ ಪೂಜಾರ, ಲಂಕೆಪ್ಪ ಹೊಸಳ್ಳಿ, ಸಂಗಪ್ಪ ಯೋಗಿ, ಮಂಜುನಾಥ ಜಡಿ ಇದ್ದರು.

ಆ.18ರಂದು ಬೆಳಗ್ಗೆ 6ಕ್ಕೆ ಗೋಣಿಬಸವೇಶ್ವರ ದೇವರಿಗೆ ಮಹಾರುದ್ರಾಭಿಷೇಕ ನಂತರ ಸಾಯಂಕಾಲ 5.30ಕ್ಕೆ ಗೋಣಿಬಸವೇಶ್ವರರ ಮಹಾರಥೋತ್ಸವ ಹಮ್ಮಿಕೊಳ್ಳಲಾಗಿದೆ. ರಾತ್ರಿ 9ಕ್ಕೆ ಗೋಣಿಬಸವೇಶ್ವರ ನಾಟ್ಯ ಸಂಘದಿಂದ 'ತವರಿದ್ದರೂ ತಬ್ಬಲಿಯಾದೆ' ಎಂಬ ಸುಂದರ ಸಾಮಾಜಿಕ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಆ.19ರಂದು ಬೆಳಗ್ಗೆ 10ಕ್ಕೆ ಜಿಲ್ಲಾ ಮಟ್ಟದ ಜಾನಪದ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಸಾಯಂಕಾಲ 5.30ಕ್ಕೆ ಕಡುಬಿನ ಕಾಳಗ, ಲಘು ರಥೋತ್ಸವ ಹಮ್ಮಿಕೊಳ್ಳಲಾಗಿದೆ. ಮಧ್ಯಾಹ್ನ 2ಕ್ಕೆ ಬಯಲು ಜಂಗೀ ನಿಕಾಲಿ ಕುಸ್ತಿ ಹಮ್ಮಿಕೊಳ್ಳಲಾಗಿದೆ ಎಂದು ಆನಂದಪ್ಪ ಪುರದ ತಿಳಿಸಿದರು.

## ನುಲಿಯ ಚಂದಯ್ಯ ಶ್ರೇಷ್ಠ ವಚನಕಾರ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸಮೀಪದ ರಾಮಗಿರಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ದಾಸೋಹದ ಜ್ಞಾನಿ ನುಲಿಯ ಚಂದಯ್ಯನವರ ಜಯಂತಿಯನ್ನು ಆಚರಿಸಲಾಯಿತು.

ನುಲಿಯ ಚಂದಯ್ಯ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಶಿಕ್ಷಣ ಪ್ರೇಮಿ ಬಸಣ್ಣ ಬೆಟಗೇರಿ, ಸಮಾಜ ಸೇವೆಯಲ್ಲಿ ಧರ್ಮವಿದೆ ಎಂದು ಹೇಳಿದ ಕಾಯಕಯೋಗಿ ನುಲಿಯ ಚಂದಯ್ಯ. ಕನ್ನಡ ಸಾಹಿತ್ಯದಲ್ಲಿ, ನುಲಿಯ ಚಂದಯ್ಯ ಅಪರೂಪದ ಅಭಿವ್ಯಕ್ತಿ. ಇವರ ವಚನಗಳು ಅತ್ಯಂತ ಸರಳ ಹಾಗೂ ನೇರವಾಗಿ ದೇಸೀ ಸೊಗಡಿನಿಂದ ಕೂಡಿವೆ. 12ನೇ ಶತಮಾನದ ವಚನಕಾರರಲ್ಲಿ ನುಲಿಯ ಚಂದಯ್ಯ ಶ್ರೇಷ್ಠರು ಎಂದು ಹೇಳಿದರು.

ಈ ವೇಳೆ ಗ್ರಾ.ಪಂ ಅಧ್ಯಕ್ಷೆ ಅಡಿವೆಕ್ಕ ಬೆಟಗೇರಿ, ಮಾಜಿ ಅಧ್ಯಕ್ಷ ಸೋಮಣ್ಣ ಬೆಟಗೇರಿ, ಎಸ್‌ಡಿಎಮ್‌ಸಿ ಅಧ್ಯಕ್ಷ ಪರಸಣ್ಣ ಲಕ್ಕಣ್ಣವರ, ಶಾಲೆಯ ಭೂದಾನಿ ಶಂಕರಗೌಡ ಪಾಟೀಲ, ಶಾಲಾ ಪ್ರಧಾನ ಗುರುಮಾತೆ ಕೆ.ಸಿ. ಹನ್ನಿರ, ಮುತ್ತಕ್ಕ ಬೆಟಗೇರಿ, ನಿವೃತ್ತ ಶಿಕ್ಷಕಿ ಎಸ್.ಎಸ್. ಮುಳಗುಂದ, ಮಹೇಂದ್ರ ಬೆಟಗೇರಿ, ಬಿ.ಎಂ. ಯರಗುಪ್ಪಿ, ಡಿ.ಎನ್. ದೊಡ್ಡಮನಿ, ರಾಜೇಶ್ವರಿ ಅಡರಕಟ್ಟಿ, ವಿ.ಕೆ. ಪೂಜಾರ, ಎಚ್.ಬಿ. ಪಟ್ಟಣದ, ಬಿ.ಟಿ. ಹೆಬ್ಬಾಳ, ಡಿ.ಎನ್. ಮಾಯಣ್ಣವರ, ಪಿ.ಕೆ. ಗಾಂಜಿ, ಪ್ರಮೀಳಾ ಸೋಮನಕಟ್ಟಿ, ಜ್ಯೋತಿ ಬೆನಕವಾಡಿ, ಪ್ರೇಮಾ ಮುಳಗುಂದ ಮುಂತಾದವರಿದ್ದರು.

# ಬಾಂಧವ್ಯ ಸಾರಿದ ರಕ್ಷಾಬಂಧನ

■ ವಿಜಯಸಾಕ್ಷಿ ಸುದ್ದಿ, ಡಂಬಳ

ಅಣ್ಣ–ತಂಗಿಯರ ರಕ್ಷಾಬಂಧನ ಹಬ್ಬವನ್ನು ಡಂಬಳ ಹೋಬಳಿಯ ಗ್ರಾಮಗಳಲ್ಲಿ ಸಂಭ್ರಮ ಸಡಗರದಿಂದ ಆಚರಿಸಲಾಯಿತು. ಭ್ರಾತೃತ್ವ ಬೆಸೆಯುವ ಹಬ್ಬದಲ್ಲಿ ಮುಂಜಾನೆಯಿಂದಲೇ ಜನರು ವಿವಿಧ ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸಿ, ನಂತರ ಮನೆಯಲ್ಲಿ ವಿಶೇಷ ಪೂಜೆ ನೆರವೇರಿಸಿದರು. ಬಳಿಕ ಮನೆಯಲ್ಲಿನ ಸಹೋದರರಿಗೆ ಸಹೋದರಿಯರು ಆರತಿ ಬೆಳಗಿ ಪರಸ್ಪರ ರಕ್ಷಾಬಂಧನ ಕಟ್ಟಿ ಹಬ್ಬದ ಶುಭಾಶಯ ಕೋರಿದರು.

ಕಚೇರಿಗಳಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳ ಮನೆಗಳಿಗೆ ತೆರಳಿ ರಕ್ಷಾಬಂಧನ ಆಚರಿಸುವ ಮೂಲಕ ಭ್ರಾತೃತ್ವ ಸಂಬಂಧ ಸಾರುತ್ತ ಹಬ್ಬದ ಶುಭಾಶಯ ಕೋರಿದರು.



ಅಣ್ಣ–ತಂಗಿಯರ ನಡುವಿನ ಪವಿತ್ರ ಬಾಂಧವ್ಯ ಸಾರುವ ರಕ್ಷಾ ಬಂಧನ ದಿನದಂದು ಮಹಿಳೆಯರ ಘನತೆ ಎತ್ತಿ ಹಿಡಿಯುವ ಮತ್ತು ಅವರಿಗೆ ಸದಾ ಗೌರವ ಹಾಗೂ ಸುರಕ್ಷಿತ ವಾತಾವರಣ ಕಲ್ಪಿಸುವ ಸಂಕಲ್ಪವನ್ನು ಮಾಡುವ ಹಬ್ಬವಾಗಿದೆ ಎಂದು ಮುಂಡರಗಿ ಆರ್‌ಎಫ್‌ಒ ಮಂಜುನಾಥ ಮೇಗಲಮನಿ ಪ್ರತಿಕ್ರಿಯಿಸಿದರು.

### ಶಿವಾನುಭವ ಕಾರ್ಯಕ್ರಮದಲ್ಲಿ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು

# ಶರಣರ ನುಡಿಗಳು ಬದುಕಿಗೆ ದಾರಿ

■ ವಿಜಯಸಾಕ್ಷಿ ಸುದ್ದಿ, ಗದಗ

ಶರಣರ ಒಂದೊಂದು ವಚನದಲ್ಲಿಯೂ ಅನುಭಾವವೇ ತುಂಬಿದೆ. ಶರಣರ ಅನುಭಾವದ ನುಡಿಗಳು ಬದುಕಿಗೆ ದಾರಿ ತೋರುವ ಕೆಲಸ ಮಾಡುತ್ತವೆ ಎಂದು ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ನುಡಿದರು.

ಲಿಂಗಾಯತ ಪ್ರಗತಿಶೀಲ ಸಂಘದ 2757ನೇ ಶಿವಾನುಭವದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ಬದುಕಿಗೆ ಸುಖ, ಶಾಂತಿ, ನೆಮ್ಮದಿ ದೊರೆಯಬೇಕಾದರೆ ಶರಣರ ವಚನಗಳ ಅಧ್ಯಯನ ಅವಶ್ಯ. ಅದುವೇ ಆಧ್ಯಾತ್ಮಿಕ ವಿದ್ಯೆ. ಅವುಗಳಿಂದಲೇ ಸುಖ, ಸಂತೋಷ. ಮಾನವನ ದುರ್ಗುಣಗಳನ್ನು ಕಳೆಯುವ ಶಕ್ತಿ ವಚನಗಳಿಗಿವೆ. ಬದುಕು ಬಿದ್ದು ಹೋಗದಂತೆ ಶರಣರ ವಚನಗಳು ಮಾಡುತ್ತವೆ.



ಗದಗ ಗ್ರಾಮೀಣ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಎಸ್.ಎಂ. ಮರಿಗೌಡ್ರ 'ಕಡಗೀಲಿಲ್ಲದ ಬಂಡಿ ಹೊಡೆಗೆಡೆಯದೆ ಮಾಳ್ಪುದೆ?' ಎಂಬ ವಿಷಯ ಕುರಿತು ಮಾತನಾಡುತ್ತಾ, ಬಂಡಿ ಸುರಕ್ಷಿತವಾಗಿ ಸಾಗಬೇಕಾದರೆ ಕಡಗೀಲು ಅವಶ್ಯ. ಕಡಗೀಲು ಇಲ್ಲದಿದ್ದರೆ ಬಂಡಿ ಕಳಚಿ ಬೀಳುತ್ತದೆ. ಹಾಗೆ ಮಾನವನ ದೇಹವೆಂಬ ಬಂಡಿಗೆ ಶಿವಶರಣರ ನುಡಿಗಳು ಎಂಬ ಕಡಗೀಲು ಅವಶ್ಯ. ಬಂಡಿ, ಬಂಡಿಯ ಚಕ್ರ, ಬಂಡಿಯಲ್ಲಿ ಪ್ರಯಾಣ ಮಾಡುವವನ ಗುರಿ, ಎಲ್ಲವನ್ನು ಕಡಗೀಲು ನಿರ್ಧರಿಸುತ್ತದೆ. ಹಾಗೆ ಮಾನವನ ದೇಹ, ಗರ್ವದಿಂದ ನಡೆಯುವ ಗತಿ, ಅವನ ಗುರಿ, ಎಲ್ಲವನ್ನು ನಿರ್ಧರಿಸುವುದು ಅವನ ಮನಸ್ಸು. ಅದಕ್ಕೆ ಶಿವಶರಣರ ವಚನಗಳ ನುಡಿಗಟ್ಟುಗಳು ಕಡಗೀಲು ಇದ್ದಂತೆ ಎಂದು ದೃಷ್ಟಾಂತದೊಂದಿಗೆ ತಿಳಿಸಿದರು.

ಆದ್ದರಿಂದ ನಿತ್ಯ ಹತ್ತಾರು ವಚನಗಳನ್ನು ಓದುವುದರಿಂದ ಬದುಕು ಸಾರ್ಥಕವಾಗುತ್ತದೆ. ಲೌಕಿಕವಾದ ವಸ್ತುಗಳಿಂದ ಜೀವನ ಹಾಳು ಮಾಡಿಕೊಳ್ಳದೆ ವಚನಗಳ ಓದಿನಿಂದ ಜೀವನವನ್ನು ಹಗುರ ಮಾಡಿಕೊಳ್ಳಬಹುದು. ಶರಣರ ವಚನಗಳಲ್ಲಿ ಅಂಥ ಅದ್ಭುತ ಶಕ್ತಿ ಇದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಶೈಲಾ ಕೋಟೆಕಲ್ಲ ಉಪಸ್ಥಿತರಿದ್ದರು. ವಚನ ಸಂಗೀತ ಸೇವೆಯನ್ನು ಗುರುನಾಥ್ ಸುತಾರ ಹಾಗೂ ರೇವಣಸಿದ್ದಯ್ಯ ಮಂಟೂರಮಠ ನಡೆಸಿದರು. ಧರ್ಮಗ್ರಂಥ ಪಠಣವನ್ನು ಪುರುಷೋತ್ತಮ ಹೂಗಾರ ಮತ್ತು ವಚನ ಚಿಂತನವನ್ನು ವೀರೇಶ ಮದ್ಲಿ ಮಂಡಿಸಿದರು. ದಾಸೋಹ ಸೇವೆಯನ್ನು ಚೆನ್ನಮ್ಮ ಚಳ್ಳಮರದ ಇವರ ಸ್ಮರಣಾರ್ಥ ಅವರ ಮಗ, ಸೊಸೆ, ಮೊಮ್ಮಕ್ಕಳು, ಕುಟುಂಬ ವರ್ಗದವರು ವಹಿಸಿದ್ದರು.

ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ ಬಾಲಚಂದ್ರ ಭರಮಗೌಡ್ರ, ಉಪಾಧ್ಯಕ್ಷ ಡಾ. ಉಮೇಶ ಪುರದ, ವಿದ್ಯಾ ಪ್ರಭು ಗಂಜಿಹಾಳ, ಕಾರ್ಯದರ್ಶಿ ವೀರಣ್ಣ ಗೋಟಡಕಿ, ಸಹಕಾರ್ಯದರ್ಶಿ ಸೋಮನಾಥ ಪುರಾಣಿಕ, ನಾಗರಾಜ್ ಹಿರೇಮಠ, ಸಂಘಟನಾ ಕಾರ್ಯದರ್ಶಿ ಮಹೇಶ್ ಗಾಣಿಗೇರ, ಕೋಶಾಧ್ಯಕ್ಷ ಬಸವರಾಜ ಕಾಡಪ್ಪನವರ, ಶಿವಾನುಭವ ಸಮಿತಿಯ ಚೇರಮನ್ ಐ.ಬಿ. ಬೆನಕೊಪ್ಪ, ಸಹ ಚೇರಮನ್ ಶಿವಾನಂದ ಹೊಂಬಳ ಮತ್ತು ಶ್ರೀಮಠದ ಭಕ್ತರು ಉಪಸ್ಥಿತರಿದ್ದರು. ಡಾ. ಉಮೇಶ ಪುರದ ಸ್ವಾಗತಿಸಿದರು. ವಿದ್ಯಾ ಪ್ರಭು ಗಂಜಿಹಾಳ ಕಾರ್ಯಕ್ರಮ ನಿರೂಪಿಸಿದರು.

# ದಂಡಪ್ಪ ಮಾನ್ವಿ ಆಸ್ಪತ್ರೆಯಲ್ಲಿ ಪೂರ್ಣ ಪ್ರಮಾಣದ

## ಚಿಕಿತ್ಸೆಗೆ ಅನುಕೂಲ ಕಲ್ಪಿಸಲು ಮನವಿ




■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಸರ್ಕಾರದ ದಂಡಪ್ಪ ಮಾನ್ವಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಪೂರ್ಣ ಪ್ರಮಾಣದ ಚಿಕಿತ್ಸೆಗೆ ಅನುಕೂಲ ಕಲ್ಪಿಸಲು ಗದಗ ಜಿಲ್ಲಾ ವಿಕಾಸ ವೇದಿಕೆ ಅಧ್ಯಕ್ಷ ವಿಶ್ವನಾಥ ಖಾನಾಪೂರ ಮನವಿ ಮಾಡಿದ್ದಾರೆ.

ಗದಗ–ಬೆಟಗೇರಿ ನಗರದ ಹಾಗೂ ಸುತ್ತಲೂ ಇರುವ ಗ್ರಾಮದ ಮಹಿಳೆಯರಿಗೆ ಹೆರಿಗೆ ಹಾಗೂ ಮಕ್ಕಳ ಚಿಕಿತ್ಸೆಗಾಗಿ ಈ ಆಸ್ಪತ್ರೆ ಅನುಕೂಲಕರವಾಗಿದೆ.

ಇಲ್ಲಿ ಪೂರ್ಣ ಪ್ರಮಾಣದ ಚಿಕಿತ್ಸೆಗೆ ವ್ಯವಸ್ಥೆಗೆ ಅನುಕೂಲ ಮಾಡಿಕೊಡಬೇಕಿದೆ. ಪಾರ್ಕಿಂಗ್ ವ್ಯವಸ್ಥೆ, ವೈದ್ಯರು ಹಾಗೂ ಸಿಬ್ಬಂದಿಗಳಿಗೆ ವಸತಿ ಸೌಕರ್ಯವೂ ಇಲ್ಲಿದೆ.

ಚಿಕಿತ್ಸೆ ಇತ್ಯಾದಿ ವಿಚಾರಗಳಲ್ಲಿ ಇನ್ನಷ್ಟು ಅನುಕೂಲ ಕಲ್ಪಿಸಿಕೊಡಲು ಸಂಬಂಧಿಸಿದ ಜಿಲ್ಲಾ ಆಡಳಿತ ಗಮನ ಹರಿಸಬೇಕೆಂದು ಅವರು ಪತ್ರಿಕಾ ಹೇಳಿಕೆಯಲ್ಲಿ ವಿನಂತಿದ್ದಾರೆ.

# ವೈದ್ಯಕೀಯ ಸೇವೆಯನ್ನು ತ್ವರಿತಗತಿಯಲ್ಲಿ ದೊರಕಿಸಿ

▸▸ ಮೊದಲನೇ ಪುಟದಿಂದ



ಈ ಸಂದರ್ಭದಲ್ಲಿ ಗದಗ–ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರ್‌ಸಾಬ ಬಬರ್ಚಿ, ಜಿಲ್ಲಾ ಪಂಚಾಯಿತಿ ಸಿಇಒ ಭರತ್ ಎಸ್, ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ.ಆರ್, ಮಕ್ಕಳ ತಜ್ಞರು, ಸ್ತ್ರೀರೋಗ ತಜ್ಞರು, ವೈದ್ಯರು, ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಒಳ ಮೀಸಲಾತಿ ಜಾರಿಯಾಗದಿದ್ದರೆ ಉಗ್ರ ಹೋರಾಟ

▸▸ ಮೊದಲನೇ ಪುಟದಿಂದ

ಯುವ ಮುಖಂಡ ಚಂದ್ರಶೇಖರ ಹರಿಜನ ಮಾತನಾಡಿ, ರಾಜ್ಯ ಸರಕಾರ ದಲಿತರನ್ನು ತುಳಿಯುವ ಕೆಲಸ ಮಾಡುತ್ತಿದೆ. ಒಳ ಮೀಸಲಾತಿ ಜಾರಿಗೊಳಿಸುವ ಕುರಿತು ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಹೇಳಲಾಗಿತ್ತು. ಈಗ ದಲಿತರ ಮತ ಪಡೆದು ಅಧಿಕಾರ ನಡೆಸುತ್ತಿದ್ದಾರೆ. ಎಲ್ಲ ವರದಿಗಳು ಮಾದಿಗರು ಬಹುಸಂಖ್ಯಾತರರು ಎಂದು ಸ್ಪಷ್ಟವಾಗಿ ಹೇಳಿವೆ. ಆದರೂ ಮೀಸಲಾತಿ ಜಾರಿಗೊಳಿಸಲು ಹಿಂದೇಟು ಹಾಕುತ್ತಿದ್ದಾರೆ. ವಿರೋಧದ ನಡುವೆಯೂ ಹಾವನೂರ ವರದಿಯನ್ನು ಅಂದಿನ ಸರಕಾರ ಜಾರಿಗೊಳಿಸಿದೆ ಎಂದರು. ಈ ಸಂದರ್ಭದಲ್ಲಿ ಪ್ರೊ. ಸತೀಶ, ಬಸವರಾಜ ಮುಳ್ಳಾಳ, ಶೇಖಪ್ಪ ಮಾದರ, ಗಣೇಶ ಹುಬ್ಬಳ್ಳಿ, ರಾಘವೇಂದ್ರ ಪರಾಪೂರ, ಸದಾನಂದ ಬಾರಿಗಿಡದ, ಮಂಜುನಾಥ ಗಜಾಕೋಶ, ರಾಘವೇಂದ್ರ ಗುತ್ತೆಮ್ಮನವರ ಇದ್ದರು.

### ಇನ್ನರ್‌ವ್ಹೀಲ್ ಕ್ಲಬ್‌ನಿಂದ ಮಾಜಿ ಸೈನಿಕರಿಗೆ 'ರಕ್ಷಾ ಬಂಧನ'

# ಭಾರತದ ಸೈನ್ಯವು ಸಮರ್ಥ, ಬಲಿಷ್ಠ

■ ವಿಜಯಸಾಕ್ಷಿ ಸುದ್ದಿ, ಗದಗ

ನಮ್ಮ ಸೈನಿಕರು ನಮ್ಮ ಹೆಮ್ಮೆ. ಭಾರತದ ಸೈನ್ಯವು ಸಮರ್ಥ ಹಾಗೂ ಬಲಿಷ್ಠವಾಗಿದ್ದು, ಸೈನಿಕ ಸಹೋದರರು ಭಾರತಾಂಬೆಯ ಹೆಮ್ಮೆಯ ವೀರ ಪುತ್ರರು. ಹಗಲಿರುಳೆನ್ನದೇ ದೇಶವನ್ನು ಕಾಯ್ದು–ರಕ್ಷಿಸಿ, ನಮ್ಮೆಲ್ಲರಿಗೆ ರಕ್ಷಣೆ ನೀಡುತ್ತಿರುವ ಸೈನಿಕರ ಪಾತ್ರ ಅನುಪಮವಾದದ್ದು ಎಂದು ಇನ್ನರ್‌ವ್ಹಿಲ್ ಕ್ಲಬ್ ಗದಗ–ಬೆಟಗೇರಿ ಅಧ್ಯಕ್ಷೆ ಅಶ್ವಿನಿ ಜಗತಾಪ ಹೇಳಿದರು.

ಅವರು ಶನಿವಾರ ಗದುಗಿನ ಮಾಜಿ ಸೈನಿಕರ ಸಂಘದ ಸಭಾಂಗಣದಲ್ಲಿ ಗದಗ ಬೆಟಗೇರಿ ಇನ್ನರ್‌ವ್ಹಿಲ್ ಕ್ಲಬ್ ಆಯೋಜಿಸಿದ್ದ 'ಮಾಜಿ ಸೈನಿಕರಿಗೆ ಸ್ಫೂರ್ತಿಯ ರಕ್ಷಾ ಬಂಧನ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕುಟುಂಬದಿಂದ ದೂರ ಉಳಿದು, ದೇಶ ರಕ್ಷಣೆಗಾಗಿ ಇಡೀ ಜೀವನವನ್ನೇ ಮೀಸಲಿರಿಸಿದ ಸೈನಿಕರು ದೇಶ ರಕ್ಷಣೆ ಮಾಡುವ ಶೂರ ಹಾಗೂ ಶೌರ್ಯವಂತರು ಎಂಬ ಹೆಮ್ಮೆ ನಮ್ಮೆಲ್ಲರಿಗಿದೆ. ಶತ್ರುಗಳ ಎದೆಯಲ್ಲಿ ನಡುಕು ಹುಟ್ಟಿಸಿ ದೇಶ ರಕ್ಷಣೆಯೊಂದನ್ನೇ ಗುರಿಯಾಗಿಟ್ಟುಕೊಂಡು ಚಳಿ, ಮಳೆ, ಬಿಸಿಲೆನ್ನದೆ ನಿರಂತರ ಕಾಯಕ ನಿರತರಾದ ಕಾಯಕಯೋಗಿಗಳು ಎಂದು ಬಣ್ಣಿಸಿದರು.




ಮಾಜಿ ಸೈನಿಕ, ನ್ಯಾಯವಾದಿ ಸುಧೀರಸಿಂಹ ಘೋರ್ಪಡೆ ಮಾತನಾಡಿ, ಸೇನೆಯಲ್ಲಿ ಸೇವೆ ಸಲ್ಲಿಸುವುದು ಒಂದು ಒಳ್ಳೆಯ ಅವಕಾಶ. ದೇಶ ಪ್ರೇಮ, ದೇಶ ರಕ್ಷಣೆಯ ಅಡಿಯಲ್ಲಿ ಸೈನ್ಯವು ನಿರಂತರ ಸೇವೆ ಸಲ್ಲಿಸುವುದು ಭಾರತಾಂಬೆಯ ನಿಜವಾದ ಸೇವೆಯಾಗಿದೆ. ತಮ್ಮ ನಿವೃತ್ತಿಯ ನಂತರವೂ ದೇಶ ಸೇವೆ ಸಲ್ಲಿಸುವ ಸೈನಿಕರು ಅಜರಾಮರರು ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಮಾಜಿ ಸೈನಿಕರ ಸಂಘದ ಗದಗ ಜಿಲ್ಲಾ ಘಟಕದ ಅಧ್ಯಕ್ಷ ಜಿ.ಬಿ. ಮಾಲಗಿತ್ತಿಮಠ, ದೇಶ ಸೇವೆಯೇ ಈಶ ಸೇವೆ ಎಂದು ತಿಳಿದು ಸೈನ್ಯದಲ್ಲಿ ಭಾರತೀಯ ಬಂಧುಗಳ ಹಾರೈಕೆಯಿಂದ ಸೇವೆ ಸಲ್ಲಿಸಿ ವೃತ್ತಿ ಘನತೆಯನ್ನು ಎತ್ತಿ ಹಿಡಿದ ಹೆಮ್ಮೆ ನಮ್ಮ ಸೈನಿಕರ ಬಳಗಕ್ಕೆ ಇದೆ. ನನ್ನ ದೇಶ ನನ್ನ ಜನ ಎಂಬ ಧ್ಯೇಯದೊಂದಿಗೆ ಸೈನ್ಯ ಸದಾ ಸನ್ನದ್ಧವಾಗಿದೆ, ಇನ್ನರ್‌ವ್ಹಿಲ್ ಕ್ಲಬ್‌ನ ಸಹೋದರಿಯರು ರಕ್ಷಾಬಂಧನವನ್ನು ನಮ್ಮೊಂದಿಗೆ ಆಚರಿಸಿ ಸೈನ್ಯ ಹಾಗೂ ಸೈನಿಕರಿಗೆ ಮಾತೃಶಕ್ತಿಯನ್ನು ತುಂಬಿದ್ದಾರೆ ಎಂದರು.

ಇನ್ನರ್‌ವ್ಹಿಲ್ ಕ್ಲಬ್ ಗದಗ–ಬೆಟಗೇರಿ ವತಿಯಿಂದ ಮಾಜಿ ಸೈನಿಕರನ್ನು ಸನ್ಮಾನಿಸಲಾಯಿತು. ಕ್ಲಬ್‌ನ ಕಾರ್ಯದರ್ಶಿ ಶಿವಲೀಲಾ ಅಕ್ಕಿ ನಿರೂಪಿಸಿ ವಂದಿಸಿದರು. ಕಾರ್ಯಕ್ರಮದಲ್ಲಿ ಕ್ಲಬ್‌ನ ಜಂಟಿ ಕಾರ್ಯದರ್ಶಿ ಜಯಶ್ರೀ ಉಗಲಾಟ, ಖಜಾಂಚಿ ಪುಷ್ಪಾ ಬಂಡಾರಿ, ಎಡಿಟರ್ ವೀಣಾ ಕಾವೇರಿ, ಸದಸ್ಯರಾದ ಶಾರದಾ ಸಜ್ಜನರ, ವಿದ್ಯಾ ಗಂಜಿಹಾಳ, ಮಾಜಿ ಸೈನಿಕರಾದ ಸಿ.ಜಿ. ಸೊನ್ನದ, ವ್ಹಿ.ಬಿ. ಬಿಂಗಿ, ಎಂ.ಎಸ್. ಗುಜ್ಜಲ, ಎಸ್.ಎಸ್. ವಡ್ಡಿನ, ಮಾರುತಿ ಕಿರೇಸೂರ, ಬಸವರಾಜ ಇಟಗಿ, ಪಿ.ಎಂ. ಜಂಬಗಿ, ಬಿ.ವ್ಹಿ. ಅಬ್ಬಿಗೇರಿ, ಚನ್ನಯ್ಯ ಬಳಗಾನೂರಮಠ, ಎಸ್.ಎ. ಪಾಟೀಲ, ಎಂ.ಎಸ್. ಹಿರೇಹಾಳ, ಎಸ್.ಕೆ. ಪಾಟೀಲ, ಲಕ್ಷ್ಮಣ ಮುಧೋಳ, ಬಿ.ಎಲ್. ಪಾಟೀಲ, ಸಣ್ಣಸಿದ್ಧಪ್ಪನವರ, ಎಸ್.ಬಿ. ಸರ್ವಿ, ಕೆ.ಎಸ್. ಹಿರೇಮಠ, ಎಸ್.ಎಫ್. ಹೊನ್ನಪ್ಪನವರ, ಈರಣ್ಣ ತಾಳಕೇರಿ, ಬಿ.ಎಂ. ಹುಯಿಲಗೋಳ ಮುಂತಾದವರು ಪಾಲ್ಗೊಂಡಿದ್ದರು.

# ಶಾಸಕ ಯಾತ್ನಾಳ ರಾಜೀನಾಮೆ ನೀಡಲಿ

■ ವಿಜಯಸಾಕ್ಷಿ ಸುದ್ದಿ, ಗದಗ



ಭಾರತದ ಅಖಂಡತೆಗೆ ಧಕ್ಕೆ ತರುತ್ತಿರುವ ಶಾಸಕ ಬಸನಗೌಡ ಪಾಟೀಲ್ ಯಾತ್ನಾಳರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಶಾಸಕರಾದ ಮೇಲೆ ವಿಧಿವತ್ತಾಗಿ ವಿಧಾನಸಭೆಯಲ್ಲಿ ಭಾಗವಹಿಸಲು ಪ್ರತಿಜ್ಞಾ ವಿಧಿ ಸ್ವೀಕರಿಸಿ ಪ್ರಜೆಗಳ ದುಡ್ಡಿನಲ್ಲಿ ಮೆರೆಯುತ್ತಿರುವ ಶಾಸಕ ಸ್ಥಾನಕ್ಕೆ ಅಪವಾದವಾಗಿದ್ದಾರೆ ಎಂದು ಗದಗ ಶಹರ ಕಾಂಗ್ರೆಸ್ ಕಮಿಟಿ ಗದಗ ಶಹರ ಉಪಾಧ್ಯಕ್ಷ ಎಂ.ಎನ್. ಶಾಲಗಾರ ಆಗ್ರಹಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ಪ್ರತಿಜ್ಞಾ ವಿಧಿ ಸ್ವೀಕರಿಸಿದ ಬಸನಗೌಡ ಪಾಟೀಲ್ ಯತ್ನಾಳ್ ಅವರು ಬೂಟಾಟಿಕೆ ಮತ್ತು ಸಮಾಜದಲ್ಲಿ ಅಶಾಂತಿ, ಕೋಮುಗಲಭೆ ಮತ್ತು ಸಾಮಾಜಿಕ ವಾತಾವರಣವನ್ನು ಹದಗೆಡಿಸುವ ಮಾತುಗಳನ್ನೇ ಆಡುತ್ತಾರೆ.

ಇತ್ತೀಚಿಗೆ ಕೊಪ್ಪಳದಲ್ಲಿ ನಡೆದ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಮಾತನಾಡಿ, ಮುಸ್ಲಿಂ ಹುಡುಗಿಯನ್ನು ಹಿಂದೂ ಹುಡುಗ ಮದುವೆಯಾದರೆ 5 ಲಕ್ಷ ರೂ ಕೊಡುತ್ತೇನೆ ಎಂದು ಹೇಳಿರುವ ಮಾತು ಮುಸ್ಲಿಂ ಧರ್ಮದ ಎಲ್ಲರ ಭಾವನೆಗೆ ಧಕ್ಕೆ ತಂದಿದೆ. ಸರಕಾರ ಈಗಾಗಲೇ ತಪ್ಪು ಮಾಡಿದವರನ್ನು ಗುರುತಿಸಿ ಕಾನೂನು ಕ್ರಮ ಜರುಗಿಸುತ್ತಿದೆ. ಸೌಹಾರ್ದತೆಯ ವಾತಾವರಣಕ್ಕೆ ಧಕ್ಕೆ ತರುವ ರೀತಿಯಲ್ಲಿ ಹೇಳಿಕೆ ನೀಡಿರುವ ಶಾಸಕ ಬಸನಗೌಡ ಪಾಟೀಲ್ ಈ ಕೂಡಲೇ ರಾಜೀನಾಮೆ ನೀಡಿ ವಿಧಾನಸಭೆಯಿಂದ ನಿರ್ಗಮಿಸಬೇಕೆಂದು ಅವರು ಆಗ್ರಹಿಸಿದ್ದಾರೆ.

# ಗದುಗಿನ ನಾಲ್ವಾಡದವರ ಓಣಿಯ ಸಾರ್ವಜನಿಕ ಗಣೇಶೋತ್ಸವಕ್ಕೆ ಸಿದ್ಧತೆ



■ ವಿಜಯಸಾಕ್ಷಿ ಸುದ್ದಿ, ಗದಗ

ಭಾರತದ 18ನೇ ಮಹಾಶಕ್ತಿ ಪೀಠ ಕೊಲ್ಹಾಪೂರದ ಶ್ರೀ ಮಹಾಲಕ್ಷ್ಮೀ ದೇವಿಯ ಭಕ್ತರನ್ನು ಆಶೀರ್ವದಿಸುವ ಸನ್ನಿವೇಶವುಳ್ಳ ದೃಶ್ಯಾವಳಿಯನ್ನು ಸಾರ್ವಜನಿಕ ಗಣೇಶೋತ್ಸವದಲ್ಲಿ ಪ್ರದರ್ಶಿಸಲು ಗದುಗಿನ ನಾಲ್ವಾಡದವರ ಓಣಿಯ ಶ್ರೀ ಗಜಾನನೋತ್ಸವ ಸಮಿತಿ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದೆ.

ಪ್ರತಿ ವರ್ಷ ವಿಶೇಷತೆಗಳನ್ನು ಮಾಡುತ್ತ ವೈಶಿಷ್ಟ್ಯಮಯ ಆಚರಣೆಗೆ ತನ್ನದೇ ಆದ ಹಿರಿಮೆಯನ್ನು ಪಡೆದಿರುವ ನಾಲ್ವಾಡದವರ ಓಣಿಯ ಶ್ರೀ ಗಜಾನನೋತ್ಸವ ಸಮಿತಿ 49ನೇ ವರ್ಷದ ಸಾರ್ವಜನಿಕ ಗಣೇಶೋತ್ಸವದ ಮಂಟಪ ನಿರ್ಮಾಣದ ಮುಂಭಾಗದಲ್ಲಿ ಭಗವಾ ಧ್ವಜಾರೋಹಣ ನೆರವೇರಿಸುವ ಮೂಲಕ ಸಂಪ್ರದಾಯದಂತೆ ಮಂಟಪ ನಿರ್ಮಾಣ ಕಾರ್ಯಕ್ಕೆ ಶನಿವಾರ ಚಾಲನೆ ನೀಡಲಾಯಿತು.

ಓಣಿಯ ಹಿರಿಯ ಸಮ್ಮುಖದಲ್ಲಿ ನಾಲ್ವಾಡದವರ ಓಣಿಯ ಶ್ರೀ ಗಜಾನನೋತ್ಸವ ಸಮಿತಿಯ ಪದಾಧಿಕಾರಿಗಳು, ಯುವಕರು ಈ ಪೂಜಾ ಕೈಂಕರ್ಯದಲ್ಲಿ ಪಾಲ್ಗೊಂಡಿದ್ದರು. ಮುಂದಿನ ವರ್ಷ 50ನೇ ವರ್ಷದ ಸಾರ್ವಜನಿಕ ಗಣೇಶೋತ್ಸವವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಲು ಸಮಿತಿಯು ರೂಪುರೇಷೆಗಳನ್ನು ಸಿದ್ಧಪಡಿಸುತ್ತಿದೆ.

# ನಿಧನ

## ಅನ್ನಪೂರ್ಣ ಅಂಕಲಕೋಟಿ



**ಲಕ್ಷ್ಮೇಶ್ವರ:** ಪಟ್ಟಣದ ಬಣಜಿಗ ಸಮಾಜದ ಹಿರಿಯ ಮಹಿಳೆ, ಸಮಾಜ ಸೇವಕಿಯಾಗಿದ್ದ ಅನ್ನಪೂರ್ಣ ಶಾಂತಪ್ಪ ಅಂಕಲಕೋಟಿ(80) ಅವರು ಆ.11 ರಂದು ಸೋಮವಾರ ನಿಧನರಾದರು. ಮೃತರಿಗೆ ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿ ಅಪಾರ ಬಂಧು ಬಳಗವಿದೆ.

## ಶಿವಲಿಂಗಮ್ಮ ನೀಲಪ್ಪಗೌಡ ಪಾಟೀಲ



**ನರೇಗಲ್ಲ:** ಸಮೀಪದ ತೋಟಗಂಟಿಯ ಶಿವಲಿಂಗಮ್ಮ ನೀಲಪ್ಪಗೌಡ ಪಾಟೀಲ(85) ದಿ. 11/08/2025ರ ಬೆಳಿಗ್ಗೆ 6ಗಂಟೆಗೆ ನಿಧನರಾದರು.

ಮೃತರು ಸಿಂಧನೂರಿನಲ್ಲಿ ವೈದ್ಯರಾಗಿರುವ ಡಾ. ಬಿ. ಎನ್. ಪಾಟೀಲರವರ ಮಾತೋಶ್ರೀಯವರಾಗಿದ್ದರು.

ಮೃತರು ಇಬ್ಬರು ಗಂಡು ಮಕ್ಕಳನ್ನು, ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

### ಕೂಡಲ ಸಂಗಮ ಶ್ರೀ ಇಷ್ಟಲಿಂಗ ಪೂಜೆ ಪೂರ್ವಭಾವಿ ಸಭೆ

# ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ

■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಆಗಸ್ಟ್ 13ರಂದು ಬೆಳ್ಳಟ್ಟಿಯಲ್ಲಿ ಕೂಡಲ ಸಂಗಮದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಪ್ರಥಮ ಜಗದ್ಗುರು ಜಯಮೃತ್ಯುಂಜಯ ಸ್ವಾಮೀಜಿ ಅವರಿಂದ ನಡೆಯುವ ಶ್ರಾವಣ ಮಾಸದ ವಿಶೇಷ ಇಷ್ಟಲಿಂಗ ಪೂಜೆ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಶಿರಹಟ್ಟಿ ತಾಲೂಕಾ ಪಂಚಮಸಾಲಿ ಸಂಘದ ತಾಲೂಕಾಧ್ಯಕ್ಷ ಬಿ.ಡಿ. ಪಲ್ಲೇದ ಹೇಳಿದರು.

ಅವರು ರವಿವಾರ ಶಿರಹಟ್ಟಿಯ ಪ್ರವಾಸಿಮಂದಿರದಲ್ಲಿ ನಡೆದ ಕಾರ್ಯಕ್ರಮದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಆ.12ರಂದು ಶಿರಹಟ್ಟಿಯಲ್ಲಿ ಅಶೋಕ ವರವಿ ಇವರ ಮಹಾಮನೆಯಲ್ಲಿ ಶ್ರೀಗಳು ವಾಸ್ತವ್ಯ ಹೂಡುವರು. ಆ.13ರ ಬೆಳಗಿನ ಜಾವ ಬೆಳ್ಳಟ್ಟಿಯ ಕೊಟ್ರೇಶ ಅಕ್ಕೂರ ಇವರ ಮಹಾಮನೆಯಲ್ಲಿ ಇಷ್ಟಲಿಂಗ ಪೂಜೆ ನೆರವೇರಿಸಿ, 10 ಗಂಟೆ ಸುಮಾರಿಗೆ ನಂದಿಧ್ವಜ, ಸಮ್ಮಾಳ, ಕುಂಭಮೇಳ ಹಾಗೂ ಸಕಲ ವಾದ್ಯಗೋಷ್ಠಿಗಳೊಂದಿಗೆ, ಭವ್ಯ ಮೆರವಣಿಗೆಯೊಂದಿಗೆ ಶ್ರೀಗಳನ್ನು ಎಪಿಎಂಸಿ ಸಭಾಭವನಕ್ಕೆ ಕರೆತಂದು ಅಲ್ಲಿ ಬೃಹತ್ ಇಷ್ಟಲಿಂಗ ಪೂಜೆಯ ನೇತೃತ್ವವನ್ನು ವಹಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು. ತಾಲೂಕಾ ಕಮಿಟಿಗೆ ಉಪಾಧ್ಯಕ್ಷರಾಗಿ ಚಂದ್ರು ಕೂಸ್ಲಾಪೂರ, ಸದಸ್ಯರಾಗಿ ಮಹೇಶ ವರವಿ, ಶಿವಪುತ್ರಪ್ಪ ನೆಲಗುಡ್ಡದ, ಶ್ರೀಕಾಂತ ಯಲಿಶಿರುಂದ, ತಾಲೂಕಾ ಮಹಿಳಾ ಘಟಕದ ಅಧ್ಯಕ್ಷೆಯಾಗಿ ನಂದಾ ಪ್ರಕಾಶ ಪಲ್ಲೇದ, ಯುವಘಟಕದ ಅಧ್ಯಕ್ಷರಾಗಿ ವಿಶ್ವನಾಥ ದಲಾಲಿ, ಕಾರ್ಯದರ್ಶಿಯಾಗಿ ನಾಗರಾಜ ಗಡ್ಡಿ, ರೈತ ಘಟಕದ ಅಧ್ಯಕ್ಷರಾಗಿ ವಸಂತಗೌಡ ಪಾಟೀಲ ಇವರುಗಳನ್ನು ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಕೊಟ್ರೇಶ ಅಕ್ಕೂರ, ಬಸವರಾಜ ಸಾಲಿ, ಅಶೋಕ ಬಳ್ಳಾರಿ, ಕಾಶಣ್ಣ ಗಿಡ್ಡವೀರಪ್ಪನವರ, ಅಶೋಕ ವರವಿ, ಶೇಖರ ಹುಡೇದ, ಚನ್ನಬಸವನಗೌಡ ಪಾಟೀಲ, ಸುರೇಶ ವರವಿ, ಬಸವರಾಜ ಕಲ್ಯಾಣಿ, ಫಕ್ಕೀರೇಶ ಕಲ್ಯಾಣಿ, ಶ್ರೀಕಾಂತ ಯಲಿಶಿರುಂದ, ಶಿವಪುತ್ರಪ್ಪ ನೆಲಗುಡ್ಡದ, ಚನ್ನಪ್ಪ ಕೊಡ್ಲಿವಾಡ, ದೇವರಾಜ ಮೇಟಿ, ಎಸ್.ಎಸ್. ಪಾಟೀಲ, ಸಿ.ಆರ್. ಪಾಟೀಲ, ಬಸವನಗೌಡ ಪಾಟೀಲ, ನಾಗರಾಜ ಗಡ್ಡಿ, ಚನ್ನವೀರಗೌಡ ತೆಗ್ಗಿನಮನಿ ಮುಂತಾದವರು ಉಪಸ್ಥಿತರಿದ್ದರು.



### ಶಿರಹಟ್ಟಿಯಲ್ಲಿ ಅಸಮರ್ಪಕ ಗೊಬ್ಬರ ಪೂರೈಕೆಯ ವಿರುದ್ಧ ಬಿಜೆಪಿ ಪ್ರತಿಭಟನೆ

# ಯೂರಿಯಾ ಸಿಗದೇ ಮಣ್ಣು ತಿನ್ನುವಂತಾಗಿದೆ

**■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ನಾಡಿನ ಅನ್ನದಾತ ರೈತರಿಗೆ ಸಮರ್ಪಕವಾಗಿ ರಸಗೊಬ್ಬರ ಪೂರೈಸದ ರಾಜ್ಯ ಕಾಂಗ್ರೆಸ್ ಸರ್ಕಾರದ ಧೋರಣೆ ಖಂಡಿಸಿ ಬಿಜೆಪಿ ಶಿರಹಟ್ಟಿ ಮಂಡಳ ಹಾಗೂ ಶಿರಹಟ್ಟಿ ಮತಕ್ಷೇತ್ರದ ಬಿಜೆಪಿ ರೈತ ಮೋರ್ಚಾದಿಂದ ಶಾಸಕ ಡಾ. ಚಂದ್ರು ಲಮಾಣಿ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಸಿ ತಹಸೀಲ್ದಾರರ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.




ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಡಾ. ಚಂದ್ರು ಲಮಾಣಿ, ರೈತರಿಗೆ ಸಮರ್ಪಕವಾಗಿ ಯೂರಿಯಾ ಗೊಬ್ಬರ ಸಿಗದೇ ಮಣ್ಣು ತಿನ್ನುವಂತಾಗಿದೆ. ಮಳೆ ಆರಂಭವಾದಂತೆ ಮೆಕ್ಕೆಜೋಳ ಬೆಳೆಗೆ ಮೇಲ್ಗೊಬ್ಬರವಾಗಿ ಯೂರಿಯಾ ಹೊಲದಲ್ಲಿ ಸಿಂಪಡಿಸಿದಾಗ ರೋಗ ಬಾಧೆಗೆ ತುತ್ತಾಗದೇ ಬೆಳೆ ಚೆನ್ನಾಗಿ ಬಂದರೆ ರೈತರ ಆರ್ಥಿಕ ಸಬಲತೆ ಸಾಧ್ಯ. ಪ್ರತಿವರ್ಷ ಸಮರ್ಪಕ ಯೂರಿಯಾ ಗೊಬ್ಬರ ಸಿಗದೇ ರೈತರು ಬೊಬ್ಬೆ ಹೊಡೆಯುವ ತಾಪತ್ರಯ ತಪ್ಪಿಲ್ಲ. ಇದಕ್ಕೆ ಕಾಂಗ್ರೆಸ್ ಸರ್ಕಾರದ ಆಡಳಿತ ವೈಖರಿ ಕಾರಣ. ತಮ್ಮ ಸರ್ಕಾರದ ತಪ್ಪು ಮುಚ್ಚಿಟ್ಟುಕೊಂಡು ರಸಗೊಬ್ಬರ ಪೂರೈಕೆಯ ದೋಷವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೃಷಿ ಸಚಿವರು ಕೇಂದ್ರ ಸರ್ಕಾರದ ಮೇಲೆ ಹೊರಿಸುವುದನ್ನು ಕೈಬಿಡಬೇಕು ಎಂದರು.

ರಾಜ್ಯಕ್ಕೆ ಪೂರೈಕೆಯಾದ ಯೂರಿಯಾ ರಸಗೊಬ್ಬರ ಕಾಳಸಂತೆಯಲ್ಲಿ ಕೇರಳಕ್ಕೆ ಸಾಗಿಸುತ್ತಿರುವುದು ನಾಚಿಕೆಗೇಡಿನ ಸಂಗತಿ. ಒಟ್ಟಾರೆ ಕಾಂಗ್ರೆಸ್ ಸರ್ಕಾರ ರೈತ ವಿರೋಧಿ ನೀತಿ ಅನುಸರಿಸುತ್ತಿದೆ. ಕಾಂಗ್ರೆಸ್ ಅಧಿನಾಯಕ ರಾಹುಲ್‌ಗಾಂಧಿ ರಾಜ್ಯದಲ್ಲಿ ಕಳ್ಳಮತದಾನ ನಡೆಯುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ದೂರುವುದನ್ನು ಬಿಟ್ಟು ಹಿಂದೆ ಗಾಂಧಿ ಕುಟುಂಬದಿಂದ ನಡೆದಿದೆ ಎಂಬುದು ಮನಗಾಣಬೇಕು. ಅದು ನಡೆದದ್ದು ಸಾಬೀತಾಗಿದ್ದರೆ ಚುನಾವಣೆ ಆಯೋಗದ ವಿರುದ್ಧ ದೂರು ದಾಖಲಿಸಬಹುದಿತ್ತು. ಅದಕ್ಕೆ ಧೈರ್ಯ ಸಾಲದೇ ವಾಪಸ್ ಆಗಿದ್ದು ಅವರ ಹತಾಶತನದ ಧೋರಣೆ ತೋರಿಸುತ್ತದೆ ಎಂದು ಹೇಳಿದರು.

ಇದಕ್ಕೂ ಮೊದಲು ಪಟ್ಟಣದ ಮಾರುತಿ ದೇವಸ್ಥಾನದಿಂದ ಆರಂಭಗೊಂಡ ಪ್ರತಿಭಟನಾ ಮೆರವಣಿಗೆ ನೆಹರು ವೃತ್ತಕ್ಕಾಗಮಿಸಿ, ಅಲ್ಲಿ ಮಾನವ ಸರಪಳಿ ನಿರ್ಮಿಸಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಬಿಜೆಪಿ ಶಿರಹಟ್ಟಿ ಮಂಡಳ ಅಧ್ಯಕ್ಷ ಸುನಿಲ ಮಹಾಂತಶೆಟ್ಟರ, ಮುಂಡರಗಿ ಮಂಡಳ ಅಧ್ಯಕ್ಷ ಹೇಮಗಿರೀಶ ಹಾವಿನಾಳ, ಎಸ್.ಬಿ. ಮಹಾಜನಶೆಟ್ಟರ, ಬಿ.ಡಿ. ಪಲ್ಲೇದ ಮಾತನಾಡಿದರು.

ತಹಸೀಲ್ದಾರ ಕೆ. ರಾಘವೇಂದ್ರ ರಾವ್ ಮನವಿ ಸ್ವೀಕರಿಸಿದರು. ಈ ವೇಳೆ ಸಿ.ಸಿ. ನೂರಶೆಟ್ಟರ, ನಾಗರಾಜ ಲಕ್ಕುಂಡಿ, ವೀರಣ್ಣ ಅಂಗಡಿ, ಜೆ.ಆರ್. ಕುಲಕರ್ಣಿ, ಪಕ್ಕೀರೇಶ ರಟ್ಟಿಹಳ್ಳಿ, ತಿಮ್ಮರಡ್ಡಿ ಮರಡ್ಡಿ, ಸಂದೀಪ ಕಪ್ಪತ್ತನವರ, ಎಚ್.ಎಂ. ದೇವಗಿರಿ, ಶಿವಪ್ಪ ಲಮಾಣಿ, ಗಂಗಾಧರ ಮೆಣಸಿನಕಾಯಿ, ಉಳವೇಶ ಪಾಟೀಲ, ಪ್ರವೀಣ ಚಿಂಚಲಿ, ಶಂಕರ ಮರಾಠೆ, ಬಸವರಾಜ ವಡವಿ, ಪಕ್ಕೀರೇಶ ಕರಿಗಾರ, ರಾಜೀವರಡ್ಡಿ ಬಮ್ಮನಕಟ್ಟಿ, ಪ್ರವೀಣಗೌಡ ಪಾಟೀಲ, ಬಸವರಾಜ ನಾಯ್ಕರ, ಜಗದೀಶ ತೇಲಿ, ವಿಜಯ ಕುಂಬಾರ, ಅಕ್ಬರ ಯಾದಗಿರಿ ಮುಂತಾದವರು ಉಪಸ್ಥಿತರಿದ್ದರು.

2017ರಲ್ಲಿ ಮುಂಡರಗಿ, ಶಿರಹಟ್ಟಿ ಹಾಗೂ ಗದಗ ತಾಲೂಕಿನ ವ್ಯಾಪ್ತಿಯ 20 ಕೆರೆಗಳಿಗೆ ಜಾಲವಾಡಗಿ ಏತ ನೀರಾವರಿ ಯೋಜನೆಯಿಂದ ನೀರು ತುಂಬಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿತ್ತು. ಇದರ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು ಮೌನ ವಹಿಸಿದ್ದು ಏಕೆ ಎಂದು ಪ್ರಶ್ನಿಸಿದರಲ್ಲದೆ, ತಿಂಗಳೊಳಗೆ ಕೆರೆ ತುಂಬಿಸುವ ಯೋಜನೆ ಆರಂಭಿಸದಿದ್ದರೆ ಎಲ್ಲ ತಾಲೂಕಿನ ರೈತರೊಡಗೂಡಿ ಪಾದಯಾತ್ರೆ ನಡೆಸುವ ಮೂಲಕ ಸರ್ಕಾರದ ಆಡಳಿತ ವೈಫಲ್ಯದ ವಿರುದ್ಧ ಹೋರಾಟ ಮಾಡಲಾಗುತ್ತದೆ ಎಂದು ಶಾಸಕ ಡಾ. ಚಂದ್ರು ಲಮಾಣಿ ಎಚ್ಚರಿಸಿದರು.

## ದೋಷಪೂರಿತ ನಂಬರ್ ಪ್ಲೇಟ್ : ವಾಹನ ಸವಾರರಿಗೆ ದಂಡ

**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಪಟ್ಟಣದಲ್ಲಿ ಭಾನುವಾರ ಮುಂಜಾನೆಯೇ ಪೊಲೀಸರು ನಂಬರ್ ಪ್ಲೇಟ್ ಇಲ್ಲದ ಹಾಗೂ ದೋಷಪೂರಿತ ನಂಬರ್ ಪ್ಲೇಟ್ ಹೊಂದಿದ ವಾಹನ ಚಲಾಯಿಸುತ್ತಿದ್ದ ವಾಹನ ಸವಾರರಿಗೆ ದಂಡ ಹಾಕುವ ಮೂಲಕ ಬಿಸಿ ಮುಟ್ಟಿಸಿದರು. 50ಕ್ಕೂ ಅಧಿಕ ಬೈಕ್‌ಗಳನ್ನು ವಶಪಡಿಸಿಕೊಂಡು ದಂಡ ವಿಧಿಸಿದರಲ್ಲದೇ ಕೂಡಲೇ ನಂಬರ್ ಪ್ಲೇಟ್ ಸರಿಪಡಿಸಿಕೊಳ್ಳುವಂತೆ ಸೂಚನೆ ನೀಡಿದರು.



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ ನಿರ್ದೇಶನದಲ್ಲಿ ಶಿರಹಟ್ಟಿ ವೃತ್ತದ ಸಿಪಿಐ ನಾಗರಾಜ ಮಾಡಳ್ಳಿ ಅವರ ಮಾರ್ಗದರ್ಶನದಲ್ಲಿ, ಪಿಎಸ್‌ಐ ನಾಗರಾಜ ಗಡಾದ, ಕ್ರೈಂ ವಿಭಾಗದ ಪಿಎಸ್‌ಐ ಟಿ.ಕೆ. ರಾಠೋಡ ಅವರ ನೇತೃತ್ವದಲ್ಲಿ ತಂಡ ರಚಿಸಿ, ಇಲಾಖೆಯ ಸಿಬ್ಬಂದಿಗಳು ಹಾಗೂ ಹೋಮ್ ಗಾರ್ಡ್‌ಗಳ ಸಹಕಾರದಲ್ಲಿ ಕಾರ್ಯಾಚರಣೆ ನಡೆಸಿ ಮೋಟಾರ್ ವಾಹನ ಕಾಯ್ದೆ ಅಡಿಯಲ್ಲಿ ದಂಡವನ್ನು ಕಟ್ಟಿಸಿ ಕ್ರಮ ಕೈಗೊಂಡರು. ಪಟ್ಟಣದ ಎರಡು ಪ್ರಮುಖ ಜಾಗೆಗಳಲ್ಲಿ ಜಿಲ್ಲಾ ಪೋಲಿಸ್ ಇಲಾಖೆಯಿಂದ ಥರ್ಡ್–ಐ ಸಿ.ಸಿ ಕ್ಯಾಮರಾಗಳನ್ನು ಹಾಕಲಾಗಿದ್ದು, ಹೆಲ್ಮೆಟ್ ಇಲ್ಲದೆ, ಸೀಟ್ ಬೆಲ್ಟ್ ಹಾಕದ ವಾಹನ ಸವಾರರು ಥರ್ಡ್– ಐ ಕ್ಯಾಮರಾದಲ್ಲಿ ಸೆರೆಯಾಗಿ ದಂಡ ಕಟ್ಟುತ್ತಿದ್ದಾರೆ. ಅತ್ಯಾಧುನಿಕ ತಂತ್ರಜ್ಞಾನದ ಥರ್ಡ್ ಐ ಬಳಕೆ ಮಾಡಿರುವದರಿಂದ, ನಂಬರ್ ಮೂಲಕವೇ ಅವರಿಗೆ ದಂಡ ವಿಧಿಸುತ್ತಿದ್ದಾರೆ. ಆದರೆ, ಇದೀಗ ಥರ್ಡ್ ಐಗೆ ಚಳ್ಳೆಹಣ್ಣು ತಿನ್ನಿಸುವ ನಿಟ್ಟಿನಲ್ಲಿ ನಂಬರ್ ಪ್ಲೇಟ್‌ನಲ್ಲಿ ಯಾವುದಾದರು ಒಂದು ನಂಬರ್‌ಗೆ ಕಪ್ಪು ಟೇಪ್ ಹಚ್ಚಿ ಅದು ಕಾಣದಂತೆ ಮಾಡುತ್ತಿರುವದು ಇಲಾಖೆಯ ಗಮನಕ್ಕೆ ಬಂದಿದ್ದು, ಈ ನಿಟ್ಟಿನಲ್ಲಿ ಇಲಾಖೆ ಕಟ್ಟು ನಿಟ್ಟಿನ ಕ್ರಮಕ್ಕೆ ಮುಂದಾಗಿದೆ.

ಮುಂದಿನ ದಿನಗಳಲ್ಲಿ ನೋಂದಣಿ ಸಂಖ್ಯೆ ಇಲ್ಲದ, ತಪ್ಪು ನಂಬರ್ ಪ್ಲೇಟ್ ಹಾಗೂ ನಂಬರ್ ಮರೆಮಾಚುವ ಸ್ಟಿಕರ್ ಅಂಟಿಸಿರುವದು ಕಂಡುಬಂದರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು, ಅಭಿಯಾನದಿಂದ ಜನರಲ್ಲಿ ಸಂಚಾರ ಸುಗಮ ವ್ಯವಸ್ಥೆ ಬಗ್ಗೆ ತಿಳುವಳಿಕೆ ಮೂಡಿಸಲಾಗುವುದು ಎಂದು ಸಿಪಿಐ ನಾಗರಾಜ ಮಾಡಳ್ಳಿ ಹಾಗೂ ಪಿಎಸ್‌ಐ ನಾಗರಾಜ ಗಡಾದ ಹೇಳಿದರು.

## ಮುಕ್ತಿಮಂದಿರಕ್ಕೆ ಗುಗ್ಗಳ ಸಮೇತ ಪಾದಯಾತ್ರೆ

**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಸವಣೂರ ಪಟ್ಟಣದ ಶ್ರೀ ವೀರಭದ್ರೇಶ್ವರ ಗುಗ್ಗಳ ಪಾದಯಾತ್ರಾ ಸೇವಾ ಸಮಿತಿಯವರು 30 ಕಿ.ಮೀ ದೂರದ ಮುಕ್ತಿಮಂದಿರ ಧರ್ಮಕ್ಷೇತ್ರದವರೆಗೆ ಗುಗ್ಗಳ ಸಮೇತ ಪಾದಯಾತ್ರೆ ನಡೆಸಿ ಲಿಂ.ಜ. ವೀರಗಂಗಾಧರರ ಗದ್ದುಗೆ ದರ್ಶನ ಮಾಡಿದರು.



ಈ ವೇಳೆ ಪುರವಂತರರು ಶ್ರೀಗಳ ಎದುರಿನಲ್ಲಿ ಗುಗ್ಗಳದ ಮೂಲಕ ಭಕ್ತಿ ಸಮರ್ಪಿಸಿದರು. ಈ ಸಂದರ್ಭದಲ್ಲಿ ಶ್ರೀಗಳು ಆಶೀರ್ವಚನ ನೀಡಿ, ಲಿಂ.ವೀರಗಂಗಾಧರ ಜಗದ್ಗುರುಗಳು ವಿಶ್ವಶಾಂತಿ ಮಂತ್ರದ ಮೂಲಕ ಸಮಾನತೆಯ ಸಂದೇಶ ಸಾರಿದ್ದಾರೆ. ಮುಕ್ತಿಮಂದಿರ ಧರ್ಮಕ್ಷೇತ್ರದಲ್ಲಿ ಎಲ್ಲ ಧರ್ಮಗಳ ಶ್ರೇಷ್ಠ ಪುರುಷರ ಮೂರ್ತಿ ಸ್ಥಾಪಿಸುವ ಮೂಲಕ ಸರ್ವಧರ್ಮಗಳ ಸಾರ ಒಂದೇ ಎಂದು ತೋರಿಸಿದ್ದಾರೆ. ಇದೀಗ ಲಿಂ.ಜ.ಗಳ ತ್ರಿಕೋಟಿ ಲಿಂಗ ಸ್ಥಾಪನೆ ಕನಸು ನನಸಾಗುವ ಕಾಲ ಸನ್ನಿಹಿತವಾಗಿದೆ. ನಾಡಿನಾದ್ಯಂತ ಲಿಂ.ವೀರಗಂಗಾಧರ ಜಗದ್ಗುರುಗಳ ಭಕ್ತಗಣವಿದೆ. 30 ಕಿ.ಮೀ ದೂರದಿಂದ ಗುಗ್ಗುಳ ಸಮೇತ ಪಾದಯಾತ್ರೆ ಮಾಡಿರುವುದು ಅಜ್ಜಯ್ಯನ ಮೇಲಿನ ಭಕ್ತಿಯ ಪರಾಕಾಷ್ಠೆಗೆ ಸಾಕ್ಷಿಯಾಗಿದೆ ಎಂದರು.

ಸಮಿತಿಯ ಗೌರವಾಧ್ಯಕ್ಷ ಗಂಗಯ್ಯನವರು ಸಾಲಿಮಠ, ವೀರಪ್ಪ ಮತ್ತಿಗಟ್ಟಿ, ನಾಗಪ್ಪ ಕುಂಬಾರ, ಆನಂದ ಮತ್ತಿಗಟ್ಟಿ, ವಿನಾಯಕ ಕೋಳೂರ, ರಾಜಣ್ಣ ಮಟಿಗಾರ, ಶಂಕ್ರಪ್ಪ ತಿಮ್ಮಕ್ಕನವರ, ಶಿವಮೂರ್ತೆಯ್ಯ ಚರಂತಿಮಠ, ಶಿವಾನಂದ ಕುಲಕರ್ಣಿ, ಮಲ್ಲಪ್ಪ ನೀರಲಗಿ, ಗಂಗಾಧರ, ಯೋಗೇಂದ್ರ ಜಂಬಗಿ, ನಿಂಗನಗೌಡ ದೊಡ್ಡಗೌಡ, ಅಶೋಕ ಕಾಳಶೆಟ್ಟರ, ಪ್ರಕಾಶ ಉಪನಾಳ, ಲಕ್ಷ್ಮೀ ಹಂಗನಕಟ್ಟಿ ಹಾಗೂ ಸವಣೂರಿನ ಶ್ರೀ ವೀರಭದ್ರೇಶ್ವರ ಗುಗ್ಗಳ ಸಮೇತ ಪಾದಯಾತ್ರಾ ಸೇವಾ ಸಮಿತಿ ಪದಾಧಿಕಾರಿಗಳು ಇದ್ದರು.

## ಪುನಶ್ಚೇತನ ತರಬೇತಿ ಇಂದು

**■ ವಿಜಯಸಾಕ್ಷಿ ಸುದ್ದಿ, ಗದಗ**

ನಗರದಆರ್ಥಿಕಅಧ್ಯಯನಮತ್ತು ಸಂಶೋಧನಾಕೇಂದ್ರ,ಉಪನಿರ್ದೇಶಕರ ಕಚೇರಿ ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿಅರ್ಥಶಾಸ್ತ್ರವಿಷಯದ ಉಪನ್ಯಾಸಕರಿಗೆ ಒಂದು ದಿನದ ಪುನಶ್ಚೇತನತರಬೇತಿಕಾರ್ಯಾಗಾರ ಹಾಗೂಸಾಧಕರಿಗೆಮತ್ತುನಿವೃತ್ತರಿಗೆ ಸನ್ಮಾನ ಕಾರ್ಯಕ್ರಮವು ನಗರದ ತೋಂಟದಾರ್ಯ ಕಲ್ಯಾಣ ಕೇಂದ್ರದಲ್ಲಿ ಆ.12ರಂದು ಬೆಳಿಗ್ಗೆ 9.30ಕ್ಕೆ ಜರುಗಲಿದೆ.

ಆರ್ಥಿಕ ಅಧ್ಯಯನ ಮತ್ತು ಸಂಶೋಧನಾಕೇಂದ್ರದಅಧ್ಯಕ್ಷಕುಸ್.ಎಸ್. ಪಟ್ಟಣಶೆಟ್ಟಿಅಧ್ಯಕ್ಷತೆವಹಿಸುವರು.ಪ.ಪೂ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸಿದ್ದಲಿಂಗ ಬಂಡು ಮಸನಾಯಕ್ ಉದ್ಘಾಟಿಸುವರು. ಪ್ರೊ. ಎನ್.ಜಿ. ಇಬ್ರಾಹಿಂಕಲೀಲುಲ್ಲಾ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸುವರು. ಮುಖ್ಯ ಅತಿಥಿಗಳಾಗಿಹಚ್.ಎಸ್.ಕಿಂದ್ರಿ,ಬಿ.ಎಸ್. ಮಲ್ಲಾಪೂರ,ವಾಯ್.ಸಿ.ಪಾಟೀಲ ಮುಂತಾದವರುಪಾಲ್ಗೊಳ್ಳುವರು ಎಂದು ಕಾರ್ಯಾಧ್ಯಕ್ಷ ವ್ಹಿ.ಎಸ್. ದಲಾಲಿಪ್ರಕಟಣೆಯಲ್ಲಿತಿಳಿಸಿದ್ದಾರೆ.



ಲಕ್ಷ್ಮೇಶ್ವರ ತಾಲೂಕಿನ ಮುಕ್ತಿಮಂದಿರ ಧರ್ಮಕ್ಷೇತ್ರಕ್ಕೆ ಭಾನುವಾರ ಭೇಟಿ ನೀಡಿದ ತೋಟಗಾರಿ–ಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಲಿಂ.ವೀರಗಂಗಾಧರ ಜಗದ್ಗುರುಗಳ ಗದ್ದುಗೆಗೆ ಪೂಜೆ ಸಲ್ಲಿಸಿದರು. ಈ ವೇಳೆ ಶ್ರೀಮಠದ ಶ್ರೀ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯರು ಸಚಿವರನ್ನು ಸನ್ಮಾನಿಸಿದರು. ಸನ್ಮಾನ ಸ್ವೀಕರಿಸಿದ ಸಚಿವರು, ಧರ್ಮಕ್ಷೇತ್ರದಲ್ಲಿ ತ್ರಿಕೋಟಿ ಶಿವಲಿಂಗ ಪ್ರತಿಷ್ಠಾಪನಾ ಕಾರ್ಯಕ್ಕೆ ಸಹಾಯ–ಸಹಕಾರ ಸಲ್ಲಿಸುವುದಾಗಿ ಹೇಳಿದರು. ಮಾಜಿ ಶಾಸಕರಾದ ಜಿ.ಎಸ್. ಗಡ್ಡದೇವರಮಠ, ರಾಮಣ್ಣ ಲಮಾಣಿ, ಆನಂದ ಗಡ್ಡದೇವರಮಠ, ರಾಜೀವ ಕುಂಬಿ, ವಿರೂಪಾಕ್ಷ ನಂದೆಣ್ಣವರ ಮುಂತಾದವರಿದ್ದರು.

## ಸಂಸ್ಕೃತ ದೇಶದ ಸಂಸ್ಕೃತಿಯ ಪ್ರತೀಕ

▶▶ ಮೊದಲನೇ ಪುಟದಿಂದ

ಅವರು ಮಾತನಾಡಿದರು.

ಸಂಸ್ಕೃತ ದೇವ ಭಾಷೆಯಾಗಿದ್ದು, ಈ ಭಾಷೆಯಲ್ಲಿ ಭಾರತೀಯ ವಿದ್ವಾಂಸರ ಜ್ಞಾನ ಅಡಕವಾಗಿದೆ. ಪ್ರತಿದಿನ ಸಂಸ್ಕೃತ ಶ್ಲೋಕಗಳನ್ನು ಹೇಳುವವರ ನಾಲಿಗೆಯ ಮೇಲೆ ಸರಸ್ವತಿ ನಟನೆ ಮಾಡುತ್ತಾಳೆ ಎಂದು ತಿಳಿಸಿದ ಅವರು, ಲಕ್ಷ್ಮೇಶ್ವರದ ಸಂಸ್ಕೃತ ಪಾಠ ಶಾಲೆ ವತಿಯಿಂದ ಸಂಸ್ಕೃತದ ಸಾಹಿತ್ಯ ಪಾಠ ಶಾಲೆ ಆರಂಭಿಸಿದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಮನುಕುಲದ ಉನ್ನತಿ, ಲೋಕಸತ್ಯದ ಮಹಾ ಗ್ರಂಥಗಳೆಲ್ಲ ಸಂಸ್ಕೃತದಲ್ಲಿಯೇ ಇರುವುದು ಭಾಷೆಯ ಶ್ರೀಮಂತಿಕೆಗೆ ಸಾಕ್ಷಿಯಾಗಿದೆ.

ಮಕ್ಕಳಿಗೆ ಬಾಲ್ಯದಲ್ಲಿಯೇ ಸಂಸ್ಕೃತ ಅಭ್ಯಾಸ ಮಾಡಿಸಬೇಕು ಎಂದು ತಿಳಿಸಿದರು.

ಬಳಗದ ಕಾರ್ಯದರ್ಶಿ ಜಯಲಕ್ಷ್ಮೀದೇವಿ ಗಡ್ಡದೇವರಮಠ ಮಾತನಾಡಿದರು. ಸುವರ್ಣಾಬಾಯಿ ಬಹದ್ದೂರದೇಸಾಯಿ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಶಾರಕ್ಕ ಮಹಾಂತಶೆಟ್ಟರ, ಜೆ.ಎಂ. ಮೆಳ್ಳಿಗೇರಿ, ಜಯಲಕ್ಷ್ಮೀ ಮಹಾಂತಶೆಟ್ಟರ, ರೋಹಿಣಿಬಾಯಿ ಬಹದ್ದೂರದೇಸಾಯಿ, ರಮೇಶ ನವಲೆ, ಜೆ.ಡಿ. ಲಮಾಣಿ, ಜ್ಯೋತಿ ಅರಳಿಕಟ್ಟಿ, ಕಮಲಾ ಹಿರೇಮಠ, ಸಾವಿತ್ರಮ್ಮ ಹೂವಿನ, ಎಚ್.ಎನ್. ಭಜಂತ್ರಿ, ಸಾಕ್ಷಿ ಮೆಣಸಿನಕಾಯಿ ನಿರ್ವಹಿಸಿದರು.

### ಕರವೇ ಜಿಲ್ಲಾಮಟ್ಟದ ಸಭೆಯಲ್ಲಿ ಜಿಲ್ಲಾಧ್ಯಕ್ಷ ಹನುಮಂತಪ್ಪ ಅಬ್ಬಿಗೇರಿ

# ಹೋರಾಟದಿಂದ ಹಿಂದೆ ಸರಿಯುವುದಿಲ್ಲ



**■ ವಿಜಯಸಾಕ್ಷಿ ಸುದ್ದಿ, ಗದಗ**

ಜಿಲ್ಲೆಯ ಅಭಿವೃದ್ಧಿಗಾಗಿ ಕರ್ನಾಟಕ ರಕ್ಷಣಾ ವೇದಿಕೆಯಿಂದ ಅನೇಕ ಹೋರಾಟಗಳನ್ನು ಮಾಡಿಕೊಂಡು ಬಂದಿದ್ದೇವೆ. ಹೋರಾಟಕ್ಕೆ ತಕ್ಕ ಪ್ರತಿಫಲ ಕೂಡ ಸಿಕ್ಕಿದೆ. ಮುಂದೆಯೂ ಕೂಡ ಗದಗ ಜಿಲ್ಲೆಯ ಅಭಿವೃದ್ಧಿಗಾಗಿ ನಮ್ಮ ಹೋರಾಟ ನಿರಂತರವಾಗಿ ಇರುತ್ತದೆ. ಇದರಲ್ಲಿ ಯಾವುದೇ ರಾಜಿ ಇಲ್ಲ. ಜಿಲ್ಲೆಯಲ್ಲಿ ಸಂಘಟನೆಯನ್ನು ಮತ್ತಷ್ಟು ಗಟ್ಟಿಗೊಳಿಸುತ್ತೇವೆ ಎಂದು ಕರವೇ ಜಿಲ್ಲಾಧ್ಯಕ್ಷ ಹನುಮಂತಪ್ಪ ಅಬ್ಬಿಗೇರಿ ಹೇಳಿದರು.

ಅವರು ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಕರವೇ ಜಿಲ್ಲಾಮಟ್ಟದ ಸಭೆ, ಜಿಲ್ಲಾ ಪದಾಧಿಕಾರಿಗಳು, ತಾಲೂಕಾಧ್ಯಕ್ಷರು, ತಾಲೂಕಾ ಪದಾಧಿಕಾರಿಗಳ ಹಾಗೂ ವಿವಿಧ ಘಟಕಗಳ ಅಧ್ಯಕ್ಷರುಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಗದಗ–ಬೆಟಗೇರಿ ಅವಳಿ ನಗರದ 35 ವಾರ್ಡ್‌ಗಳು ಅಭಿವೃದ್ಧಿಯಿಂದ ಹಿಂದೆ ಬಿದ್ದಿವೆ. ಉದ್ಯಾನವನ, ರಸ್ತೆ, ಚರಂಡಿ ಸೇರಿದಂತೆ ಹಲವಾರು ಕಡೆಗಳಲ್ಲಿ ಅವ್ಯವಸ್ಥೆ ತಾಂಡವವಾಡುತ್ತಿದೆ. ಈ ಬಗ್ಗೆ ಪೌರಾಯುಕ್ತರಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಮುಂಬರುವ ದಿನಗಳಲ್ಲಿ ಕರವೇ ವತಿಯಿಂದ ನಗರಸಭೆಗೆ ಮುತ್ತಿಗೆ ಹಾಕುವ ಬಗ್ಗೆ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದರು. ರಾಜ್ಯ ಸಂಘಟನಾ ಕಾರ್ಯದರ್ಶಿ ಬಸವನಗೌಡ ಪೊಲೀಸ್‌ಪಾಟೀಲ್ ಮಾತನಾಡಿ, ಜಿಲ್ಲೆಯಲ್ಲಿ ಕರವೇ ಬಲಿಷ್ಠವಾಗಿದೆ ಎಂದರು. ರಾಜ್ಯ ಸಮಿತಿ ಸದಸ್ಯ ಹನುಮಂತಪ್ಪ ಮೇಟಿ ಮಾತನಾಡಿ, ಉತ್ತರ ಕರ್ನಾಟಕದಲ್ಲಿ ಕರವೇ ಗದಗ ಜಿಲ್ಲಾ ಘಟಕ ಬೆಂಗಳೂರಿನಂತೆ ಸಂಘಟನೆಯಲ್ಲಿ ಶಿಸ್ತಿನಿಂದ ತೆ–ೂಡಗಿದೆ. ಜಿಲ್ಲೆಯಲ್ಲಿ ಸಂಘಟನೆ ಗಟ್ಟಿಯಾಗಿದೆ ಎಂದರು. ರಾಜ್ಯ ಕಾರ್ಯದರ್ಶಿ ಕರಬಸಯ್ಯ ಬಸರಿಹಳ್ಳಿಮಠ ಹಾಗೂ ರಾಜ್ಯ ಸಂಚಾಲಕ ರೆಹಮಾನ್ ಹೋಳಿ ಜಿಲ್ಲೆಯ ಸಂಘಟನೆಯ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.

ಧಾರವಾಡ ಜಿಲ್ಲಾಧ್ಯಕ್ಷ ಸಾಗರ ಗಾಯಕವಾಡ, ಜಿಲ್ಲಾ ಪ್ರ. ಕಾರ್ಯದರ್ಶಿ ಬಸವರಾಜ ಹೊಗೆಸೊಪ್ಪಿನ, ಜಿಲ್ಲಾ ಗೌರವಾಧ್ಯಕ್ಷ ಉಮೇಶ ಮೇಟಿ, ವಿನಾಯಕ ಬದಿ, ಕುಮಾರ ರೇವಣ್ಣನವರ, ಹನಮಂತಪ್ಪ ಪೂಜಾರ, ಕೃಷ್ಣ ಲಮಾಣಿ, ಮುತ್ತಣ್ಣ ಚೌಡಣ್ಣನವರ, ಲಕ್ಷ್ಮೇಶ್ವರ ತಾಲೂಕಾಧ್ಯಕ್ಷ ಲೋಕೇಶ್ ಸೂತಾರ, ನರಗುಂದ ತಾಲೂಕಾಧ್ಯಕ್ಷ ನಬಿ ಕಿಲ್ಲೇದಾರ, ಶಿವು ಮಠದ, ಅಶೋಕ ಜಗಳೂರ, ರಾಮನಗೌಡ ಹಳೇಮನಿ, ಮಹಿಳಾ ಘಟಕದ ಪ್ರ. ಕಾರ್ಯದರ್ಶಿ ಮಹದೇವ ದೊಡ್ಡಗೌಡ್ರ, ಜಿಲ್ಲಾ ಉಪಾಧ್ಯಕ್ಷೆ ಲಕ್ಷ್ಮೀ ಹಿತ್ತಲಮನಿ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಗದಗ ಜಿಲ್ಲೆಯಾದ್ಯಂತ ಈ ಕೂಡಲೇ ಎಲ್ಲ ಬಡವರಿಗೆ ಆಶ್ರಯ ಮನೆಗಳನ್ನು ಮಂಜೂರು ಮಾಡಬೇಕು. ಜಿಲ್ಲೆಯ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ನಿಯಮಾನುಸಾರ ಕಡ್ಡಾಯವಾಗಿ ಕನ್ನಡ ನಾಮಫಲಕಗಳನ್ನು ಅಳವಡಿಸಬೇಕು. ಸಾರ್ವಜನಿಕವಾಗಿ ಪ್ರಕಟಿಸುವ ಜಾಹೀರಾತುಗಳನ್ನು ಕೂಡ ಕನ್ನಡದಲ್ಲಿಯೇ ಪ್ರಕಟಿಸಬೇಕು. ಇಲ್ಲದಿದ್ದರೆ ಅಂತಹ ಸಂಸ್ಥೆಗಳಿಗೂ ಮುತ್ತಿಗೆ ಹಾಕಬೇಕಾಗುತ್ತದೆ ಎಂದು ಹನುಮಂತಪ್ಪ ಅಬ್ಬಿಗೇರಿ ಎಚ್ಚರಿಸಿದರು.

## ಮತಗಳ್ಳತನ ಆರೋಪ: ಪ್ರಿಯಾಂಕಾ ಗಾಂಧಿ, ರಾಹುಲ್ ಸೇರಿ 30 ಸಂಸದರು ಖಾಕಿ ವಶಕ್ಕೆ!

**■ ವಿಜಯಸಾಕ್ಷಿ ಸುದ್ದಿ, ನವದೆಹಲಿ**

ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಸೇರಿದಂತೆ 30 ಸಂಸದರನ್ನು ದೆಹಲಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಮತಗಳ್ಳತನ ಆರೋಪ ಮಾಡಿ ಚುನಾವಣಾ ಆಯೋಗಕ್ಕೆ ಪ್ರತಿಭಟನಾ ರ‍್ಯಾಲಿ ಹೊರಟಿದ್ದ ಹಿನ್ನೆಲೆಯಲ್ಲಿ ವಶಕ್ಕೆ ಪಡೆಯಲಾಗಿದೆ.

ಚುನಾವಣಾ ಆಯೋಗದ ತಟಸ್ಥತೆಯ ವಿರುದ್ಧ ಸಾರ್ವಜನಿಕ ಪ್ರತಿಭಟನೆ ನಡೆಸಲಾಯಿತು. ರಾಹುಲ್ ಗಾಂಧಿ ನೇತೃತ್ವದಲ್ಲಿ ಇಂಡಿಯಾ ಒಕ್ಕೂಟದ ಸಂಸದರು, ಸಂಸತ್ ಭವನದಿಂದ ಚುನಾವಣಾ ಆಯೋಗಕ್ಕೆ ಪ್ರತಿಭಟನಾ ರ‍್ಯಾಲಿ ನಡೆಸಲು ಮುಂದಾಗಿದ್ದರು. ದೆಹಲಿ ಪೊಲೀಸರು ಎಲ್ಲರನ್ನೂ ವಶಕ್ಕೆ ಪಡೆದಿದ್ದಾರೆ.

ಸಂಸತ್ತಿನ ಕಟ್ಟಡದ ಹೊರಗೆ ರಾಜಕಾರಣಿಗಳು ಮತ್ತು ಪಕ್ಷದ ಕಾರ್ಯಕರ್ತರು ಜಮಾಯಿಸಿದ್ದರು. ಹಲವರು ರಸ್ತೆಗಳಲ್ಲಿ ಕುಳಿತಿದ್ದರು. ಧ್ವಜಗಳು ಮತ್ತು ಬ್ಯಾನರ್‌ಗಳನ್ನು ಹಿಡಿದು ಘೋಷಣೆ ಕೂಗುತ್ತಾ ಬ್ಯಾರಿಕೇಡ್ ತಳ್ಳಲು ಮುಂದಾದರು. ಸಂಸತ್ ಭವನದ ಹೊರಗೆ ಭಾರಿ ಭದ್ರತೆ ಕಲ್ಪಿಸಲಾಗಿತ್ತು.

ಪ್ರತಿಭಟನೆಗೆ ಅನುಮತಿ ಪಡೆಯದ ಹಿನ್ನೆಲೆಯಲ್ಲಿ ಎಲ್ಲರನ್ನೂ ವಶಕ್ಕೆ ಪಡೆಯಲಾಯಿತು.


**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗದಗ**

ಜಿಲ್ಲಾ : ಗದಗ ಪಿನ್ ಕೋಡ್ – 582101 ರಾಜ್ಯ : ಕರ್ನಾಟಕ

ಇ–ಮೇಲ್ : apmcgadag4@gmail.com

ಸಂ:ಕೃಉಮಾಸ:ಗ: 532 2025–2026 ದಿನಾಂಕ : 11–08–2025

**ಪ್ರಕಟಣೆ**

ಈ ಮೂಲಕ ಯಾವತ್ತೂ ರೈತಬಾಂಧವರಿಗೆ, ಮತ್ತು ಪೇಟೆ ಕಾರ್ಯಕರ್ತರಿಗೆ ತಿಳಿಯಪಡಿಸುವುದೇನೆಂದರೆ, ಮೆ॥ ಅರಿಹಂತ ಟ್ರೇಡಿಂಗ್ ಕಂಪನಿ ಸಾ: ಗದಗ. ಇವರು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಹೊಂದಿರುವ ತಮ್ಮ ನಿವೇಶನ ಸಂಖ್ಯೆ: 184/ಬಿ ಹಾಗೂ ಅದರಲ್ಲಿರುವ ಕಟ್ಟಡವನ್ನು ಮೆ॥ ಮತ್ತೂರ ಬ್ರದರ್ಸ ಸಾ: ಗದಗ ಇವರಿಗೆ ಮಾರಾಟ ಮಾಡಲು ಸಮಿತಿಯ ಅನುಮತಿ ಕೋರಿರುತ್ತಾರೆ. ಕಾರಣ ಈ ಕುರಿತು ಸದರಿಯವರಿಂದ ಏನಾದರೂ ಪಾವತಿ ಬಾಕಿ ಇದ್ದಲ್ಲಿ ಅಥವಾ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಪ್ರಕಟಣೆ ದಿನಾಂಕದಿಂದ 15 ದಿನಗಳ ಒಳಗಾಗಿ ಸಮಿತಿಯ ಕಾರ್ಯದರ್ಶಿಯವರಿಗೆ ಲಿಖಿತ ಮೂಲಕ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬಂದ ಯಾವುದೇ ಆಕ್ಷೇಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– **ಕಾರ್ಯದರ್ಶಿ** ಕೃಷಿ ಉತ್ಪನ್ನ ಮಾರುಕಟ್ಟೆಸಮಿತಿ ಗದಗ

ಸಹಿ/– **ಅಧ್ಯಕ್ಷರು** ಕೃಷಿ ಉತ್ಪನ್ನ ಮಾರುಕಟ್ಟೆಸಮಿತಿ ಗದಗ


VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka